

GHS KOMANALU SHIMOGA

# SCIENCE NOTES 10th STD

RAGHAVENDRA V T 9343567952

Dell
[Pick the date]

# ಅಧ್ಯಾಯ–10 ಬೆಳಕು, ಪ್ರತಿಫಲನ ಮತ್ತು ವಕ್ರೀಭವನ 7 ಅಂಕ

**ಬೆಳಕಿನ ಪ್ರತಿಫಲನ** ಪ್ರತಿಫಲನ ಒಂದು ಮಾಧ್ಯಮದಲ್ಲಿ ಚಲಿಸುತ್ತಿರುವ ಬೆಳಕಿನ ಕಿರಣವು ಒಂದು ಮಾಧ್ಯಮದ ಒಂದು ಮೇಲ್ಮೈ ಗೆ ಹೊಡೆದು ಪುನಃ ಅದೇ ಮಾಧ್ಯಮದಲ್ಲಿ ಹಿಂತಿರುಗುವ ವಿದ್ಯಮಾನ

**ಬೆಳಕಿನ ಪ್ರತಿಫಲನದ ನಿಯಮ** 1. ಪತನ ಕೋನವು ಪ್ರತಿಫಲನ ಕೋನಕ್ಕೆ ಸಮನಾಗಿರುತ್ತದೆ 2.ಪತನ ಕಿರಣ, ಪ್ರತಿಫಲನ ಕಿರಣ ಮತ್ತು ಪತನ ಬಿಂದುವಿನಲ್ಲಿ ಪ್ರತಿಫಲನದ ಮೇಲ್ಮೈಗೆ ಎಳೆದ ಲಂಬ, ಈ ಮೂರೂ ಒಂದೇ ಸಮತಲದಲ್ಲಿರುತ್ತವೆ

**ಸಮತಲ ದರ್ಪಣದಲ್ಲಿ ಉಂಟಾಗುವ ಪ್ರತಿ ಬಿಂಬದ ಲಕ್ಷಣಗಳು** 1 ಸಮತಲ ದರ್ಪಣದಲ್ಲಿ ಉಂಟಾದ ಪ್ರತಿಬಿಂಬವು ಯಾವಾಗಲೂ ಮಿಥ್ಯ ಮತ್ತು ನೇರವಾಗಿರುತ್ತದೆ. 2 ಪ್ರತಿಬಿಂಬದ ಗಾತ್ರವು ವಸ್ತುವಿನ ಗಾತ್ರಕ್ಕೆ ಸಮನಾಗಿರುತ್ತದೆ. 3 ವಸ್ತುವು ದರ್ಪಣದ ಮುಂದೆ ಎಷ್ಟು ದೂರದಲ್ಲದೆಯೋ, ಅಷ್ಟೇ ದೂರದಲ್ಲ ದರ್ಪಣದ ಹಿಂದೆ ಪ್ರತಿಬಿಂಬವು ಉಂಟಾಗುತ್ತದೆ 4 ಪ್ರತಿಬಿಂಬವು ಪಾರ್ಶ್ವ ಪಲ್ಲಟ ಹೊಂದಿರುತ್ತದೆ

**ಗೋಳೀಯ ದರ್ಪಣಗಳು:** ವಕ್ರಮೇಲ್ಮೈ ಹೊಂದಿರುವ ದರ್ಪಣಗಳನ್ನು ಗೋಳೀಯ ದರ್ಪಣಗಳು ಎನ್ನುತ್ತೇವೆ

**ನಿಮ್ನ ದರ್ಪಣ** ಗೋಳೀಯ ದರ್ಪಣದ, ಪ್ರತಿಫಲಿಸುವ ಮೇಲ್ಮೈ ಒಳಮುಖವಾಗಿ ಬಾಗಿದ್ದರೆ ನಿಮ್ನ ದರ್ಪಣ

**ಪೀನ ದರ್ಪಣ** ಗೋಳೀಯ ದರ್ಪಣದ, ಪ್ರತಿಫಲಿಸುವ ಮೇಲ್ಮೈ ಉಬ್ಬಿದ್ದು ಹೊರಮುಖವಾಗಿ ಬಾಗಿದ್ದರೆ, ಅದು ಪೀನ ದರ್ಪಣ

**ದರ್ಪಣದ ಧ್ರುವ** (Pole) ಈ ಬಿಂದುವು ಗೋಲಾಕಾರದ ಪ್ರತಿಫಲಿಸುವ ಮೇಲ್ಮೈಯ ಕೇಂದ್ರ P

**ವಕ್ರತಾ ಕೇಂದ್ರ (C):** ಗೋಳೀಯ ದರ್ಪಣದ ಪ್ರತಿಫಲಿಸುವ ಮೇಲ್ಮೈ ಗೋಳದ ಕೇಂದ್ರ ಬಿಂದು

**ವಕ್ರತಾ ತ್ರಿಜ್ಯ R** ಗೋಳೀಯ ದರ್ಪಣದ ಪ್ರತಿಫಲಿಸುವ ಭಾಗವನ್ನು ಹೊಂದಿರುವ ಗೋಳದ ತ್ರಿಜ್ಯ.

**ಪ್ರಧಾನಾಕ್ಷ** ಗೋಳೀಯ ದರ್ಪಣದ ವಕ್ರತಾ ಕೇಂದ್ರ ಮತ್ತು ಧ್ರುವದ ಮೂಲಕ ಹಾದು ಹೋಗುವ ಸರಳರೇಖೆಯನ್ನು ಪ್ರಧಾನಾಕ್ಷ ಎನ್ನುವರು. ಪ್ರಧಾನಾಕ್ಷವು ದರ್ಪಣಕ್ಕೆ ಧ್ರುವದಲ್ಲಿ ಲಂಬವಾಗಿರುತ್ತದೆ.

**ವಕ್ರತಾ ಕೇಂದ್ರ** ಗೋಳಗಳ ಕೇಂದ್ರಗಳನ್ನು ಮಸೂರದ ವಕ್ರತಾ ಕೇಂದ್ರಗಳು ಎನ್ನುವರು.

**ಪ್ರಧಾನಾಕ್ಷ** ಮಸೂರದ ವಕ್ರತಾ ಕೇಂದ್ರಗಳ ಮೂಲಕ ಹಾದು ಹೋಗುತ್ತಿರುವ ಕಾಲ್ಪನಿಕ ರೇಖೆಯನ್ನು ಪ್ರಧಾನಾಕ್ಷ

**ದೃಕ್ ಕೇಂದ್ರ** ಮಸೂರದ ಕೇಂದ್ರ ಬಿಂದುವನ್ನು ದೃಕ್ ಕೇಂದ್ರ ಎನ್ನುವರು. O

**ಸಂಗಮ ಕೇಂದ್ರ** ದರ್ಪಣವು ಸೂರ್ಯನ ಬೆಳಕನ್ನು ತೀಕ್ಷ್ಣ ಹಾಗೂ ಪ್ರಕಾಶಮಾನವಾದ ಒಂದು ಬಿಂದುವಿನಲ್ಲಿ ಕೇಂದ್ರೀಕರಿಸುತ್ತದೆ. ಈ ಬಿಂದುವು ನಿಮ್ನ ದರ್ಪಣದ ಸಂಗಮ ಕೇಂದ್ರವಾಗಿದೆ.

**ಸಂಗಮ ದೂರ** ದರ್ಪಣದಿಂದ ಕೇಂದ್ರೀಕರಿಸಲ್ಪಟ್ಟ ಸೂರ್ಯನ ಬೆಳಕಿನ ಕಿರಣಗಳ ಶಾಖವು ಕಾಗದದಲ್ಲಿ ಜ್ವಾಲೆಯನ್ನು ಉಂಟುಮಾಡುತ್ತದೆ. ದರ್ಪಣದಿಂದ ಈ ಬಿಂಬಕ್ಕಿರುವ ದೂರವು ದರ್ಪಣದ ಅಂದಾಜು ಸಂಗಮ ದೂರವಾಗಿದೆ

**ಗೋಳೀಯ ದರ್ಪಣದ ಸಂಗಮದೂರ f** ಗೋಳೀಯ ದರ್ಪಣದ ಧ್ರುವ ಮತ್ತು ಸಂಗಮ ಬಿಂದುಗಳ ನಡುವಿನ ದೂರ

**ದ್ಯುತಿರಂಧ್ರ (aperture)** ಗೋಳೀಯ ದರ್ಪಣದ ಪ್ರತಿಫಲಿಸುವ ಮೇಲ್ಮೈಯ ವ್ಯಾಸ




**ನಿಮ್ನ ದರ್ಪಣದ ಸಂಗಮ ಬಿಂದು (F)** ಪ್ರಧಾನಾಕ್ಷಕ್ಕೆ ಸಮಾಂತರವಾಗಿ ಹಲವಾರು ಕಿರಣಗಳು ನಿಮ್ನ ದರ್ಪಣದ ಮೇಲೆ ಬೀಳುತ್ತಿವೆ. ಪ್ರತಿಫಲಿತ ಎಲ್ಲಾ ಕಿರಣಗಳು ದರ್ಪಣದ ಪ್ರಧಾನಾಕ್ಷದ ಮೇಲಿರುವ ಒಂದು ಬಿಂದುವಿನಲ್ಲಿ ಸಂಧಿಸುತ್ತಿವೆ. ಈ ಬಿಂದುವನ್ನು ನಿಮ್ನ ದರ್ಪಣದ ಸಂಗಮ ಬಿಂದು ಎನ್ನುವರು.(F)

**ಪೀನ ದರ್ಪಣದ ಸಂಗಮಬಿಂದು F** ಪೀನ ದರ್ಪಣದಿಂದ ಪ್ರತಿಫಲಿಸಲ್ಪಟ್ಟ ಕಿರಣಗಳು ಮತ್ತು ಪ್ರಧಾನಾಕ್ಷಕ್ಕೆ ಸಮಾಂತರವಾಗಿರುವ ಪ್ರತಿಫಲಿತ ಕಿರಣಗಳು ಪ್ರಧಾನಾಕ್ಷದ ಮೇಲಿರುವ ಒಂದು ಬಿಂದುವಿನಿಂದ ಬಂದಂತೆ ಭಾಸವಾಗುತ್ತವೆ. ಈ ಬಿಂದುವನ್ನು ಪೀನ ದರ್ಪಣದ ಸಂಗಮಬಿಂದು ಎನ್ನುವರು. ಸಂಗಮ ಬಿಂದುವನ್ನು ಈ ಅಕ್ಷರದಿಂದ ಸೂಚಿಸುವರು.

**ಗೋಳೀಯ ದರ್ಪಣದ ವಕ್ರತಾ ತ್ರಿಜ್ಯ ಮತ್ತು ಸಂಗಮ ದೂರದ ' f ನಡುವಿನ ಸಂಭಂದ**
ಚಿಕ್ಕ ದ್ಯುತಿರಂಧ್ರವನ್ನು ಹೊಂದಿರುವ ಗೋಳೀಯ ದರ್ಪಣಗಳ ವಕ್ರತಾ ತ್ರಿಜ್ಯವು ಅದರ ಸಂಗಮ ದೂರದ ಎರಡರಷ್ಟಕ್ಕೆ ಸಮನಾಗಿರುವುದು ಕಂಡುಬರುತ್ತದೆ. ಇದನ್ನು R=2f ಎಂದು ಸೂಚಿಸುತ್ತೇವೆ.

## ಪೀನ ದರ್ಪಣದಿಂದ ಪ್ರತಿಬಿಂಬದ ರಚನೆ

ಪೀನ ದರ್ಪಣದಿಂದ ಉಂಟಾದ ಪ್ರತಿಬಿಂಬದ ಅಧ್ಯಯನಕ್ಕಾಗಿ ವಸ್ತುವಿನ ಎರಡು ಸ್ಥಾನಗಳನ್ನು ಪರಿಗಣಿಸುತ್ತೇವೆ. ಮೊದಲನೆಯದರಲ್ಲಿ ವಸ್ತುವು ಅನಂತದಲ್ಲಿದ್ದರೆ, ಎರಡನೆಯದರಲ್ಲಿ ವಸ್ತುವು ದರ್ಪಣದಿಂದ ನಿರ್ದಿಷ್ಟ ದೂರದಲ್ಲ ಇರುತ್ತದೆ. ವಸ್ತುವಿನ ಈ ಎರಡು ಸ್ಥಾನಗಳಿಗೆ ಪೀನ ದರ್ಪಣದಿಂದ ಉಂಟಾದ ಪ್ರತಿಬಿಂಬಗಳ ರೇಖಾ ಚಿತ್ರಗಳನ್ನು ತೋರಿಸಲಾಗಿದೆ




| ವಸ್ತುವಿನ ಸ್ಥಾನ | ಪ್ರತಿಬಿಂಬದ ಸ್ಥಾನ | ಪ್ರತಿಬಿಂಬದ ಗಾತ್ರ | ಪ್ರತಿಬಿಂಬದ ಸ್ವಭಾವ |
|---|---|---|---|
| ಅನಂತದಲ್ಲಿರುವಾಗ | ಸಂಗಮ ಬಿಂದು Fನಲ್ಲಿ, ದರ್ಪಣದ ಹಿಂಬಾಗದಲ್ಲಿ | ಅತ್ಯಂತ ಚಿಕ್ಕದಾದ, ಚುಕ್ಕೆಯ ಗಾತ್ರದಷ್ಟು | ಮಿಥ್ಯ ಮತ್ತು ನೇರ |
| ಅನಂತ ಮತ್ತು ದರ್ಪಣದ ಧ್ರುವ Pಯ ನಡುವೆ | P ಮತ್ತು F ನಡುವೆ, ದರ್ಪಣದ ಹಿಂಭಾಗದಲ್ಲಿ | ಚಿಕ್ಕದಾದ | ಮಿಥ್ಯ ಮತ್ತು ನೇರ |

**ಕಾರ್ಟಿಸಿಯನ್ ಸಾಂಪ್ರದಾಯಿಕ ಸಂಕೇತಗಳು** ಗೋಳೀಯ ದರ್ಪಣಗಳಲ್ಲ ಬೆಳಕಿನ ಪ್ರತಿಫನದ ಕುರಿತು ಅಭ್ಯಾಸ ಮಾಡುವಾಗ ಕೆಲವು ನಿರ್ದಿಷ್ಟ ಸಾಂಪ್ರದಾಯಿಕ ಸಂಕೇತಗಳನ್ನು ಅನುಸರಿಸಬೇಕು. ಇವುಗಳನ್ನು ಹೊಸ ಕಾರ್ಟಿಸಿಯನ್ ಸಾಂಪ್ರದಾಯಿಕ ಸಂಕೇತಗಳು ಎನ್ನುವರು .

1. ವಸ್ತುವನ್ನು ಯಾವಾಗಲೂ ದರ್ಪಣದ ಎಡ ಭಾಗದಲ್ಲಿ ಇಡಲಾಗುತ್ತದೆ. ವಸ್ತುವಿನಿಂದ ದರ್ಪಣದ ಮೇಲೆ ಬೀಳುವ ಬೆಳಕು ಎಡಗಡೆಯಿಂದ ಬೀಳುತ್ತದೆ.

2. ಪ್ರಧಾನ ಅಕ್ಷಕ್ಕೆ ಸಮಾಂತರವಾಗಿರುವ ಎಲ್ಲಾ ದೂರಗಳನ್ನು ದರ್ಪಣದ ಧ್ರುವದಿಂದ ಅಳೆಯಲಾಗುತ್ತದೆ.

3. ಮೂಲ ಬಿಂದುವಿನ ಬಲಭಾಗದಲ್ಲಿ (+X - ಅಕ್ಷದ ಉದ್ದಕ್ಕೂ) ಅಳೆಯಲಾದ ಎಲ್ಲ ದೂರಗಳನ್ನು ಧನಾತ್ಮಕವಾಗಿ ಹಾಗೆಯೇ ಮೂಲ ಬಿಂದುವಿನ ಎಡಭಾಗದಲ್ಲಿ (–X - ಅಕ್ಷದ ಉದ್ದಕ್ಕೂ) ಅಳೆಯಲಾದ ಎಲ್ಲ ದೂರಗಳನ್ನು ಋಣಾತ್ಮಕವಾಗಿ ತೆಗೆದುಕೊಳ್ಳಲಾಗುತ್ತದೆ. 4. ಪ್ರಧಾನ ಅಕ್ಷಕ್ಕೆ ಲಂಬವಾಗಿ ಅಥವಾ ಮೇಲಿನ ಕಡೆಗೆ (+Y - ಅಕ್ಷದ ಉದ್ದಕ್ಕೂ) ಅಳೆಯಲಾಗುವ ದೂರಗಳನ್ನು ಧನಾತ್ಮಕವಾಗಿ ತೆಗೆದುಕೊಳ್ಳಲಾಗುತ್ತದೆ. 5. ಪ್ರಧಾನ ಅಕ್ಷಕ್ಕೆ ಲಂಬವಾಗಿ ಅಥವಾ ಕೆಳಗಿನ ಬದಿಯ ಕಡೆಗೆ (–Y - ಅಕ್ಷದ ಉದ್ದಕ್ಕೂ) ಅಳೆಯಲಾಗುವ ದೂರಗಳನ್ನು ಋಣಾತ್ಮಕವಾಗಿ ತೆಗೆದುಕೊಳ್ಳಲಾಗುತ್ತದೆ.

## ದರ್ಪಣ ಸೂತ್ರ ಮತ್ತು ವರ್ಧನೆ

ಗೋಳೀಯ ದರ್ಪಣದಲ್ಲಿ, ದರ್ಪಣದ ಧ್ರುವದಿಂದ ವಸ್ತುವಿಗೆ ಇರುವ ದೂರ ವಸ್ತು ದೂರ (u)

ದರ್ಪಣದ ಧ್ರುವದಿಂದ ಪ್ರತಿಬಿಂಬಕ್ಕೆ ಇರುವ ದೂರವನ್ನು, ಪ್ರತಿಬಿಂಬ ದೂರ (v) ಎನ್ನುವರು.

ದರ್ಪಣದ ಧ್ರುವದಿಂದ ಪ್ರಧಾನ ಸಂಗಮಕ್ಕಿರುವ ದೂರವನ್ನು ಸಂಗಮದೂರ (*f*) ಎನ್ನುವರು.

ಈ ಮೂರು ಪರಿಮಾಣಗಳ ನಡುವೆ ಇರುವ ಸಂಬಂಧ ನೀಡುವ ದರ್ಪಣದ ಸೂತ್ರ :

- ದರ್ಪಣದ ಸೂತ್ರ: $\frac{1}{f} = \frac{1}{v} + \frac{1}{u}$ ಅಥವಾ $f = \frac{uv}{u+v}$
- ಮಸೂರದ ಸೂತ್ರ: $\frac{1}{f} = \frac{1}{v} - \frac{1}{u}$, ವರ್ಧನೆ: $M = \frac{h1}{h} = -\frac{v}{u}$
- ಮಸೂರದ ಸಾಮರ್ಥ್ಯ: $P = \frac{1}{f}$

**ವರ್ಧನೆ** ಸಾಪೇಕ್ಷವಾಗಿ ಯಾವುದೇ ಪ್ರತಿಬಿಂಬವು ವಸ್ತುವಿನ ಗಾತ್ರಕ್ಕಿಂತ ಎಷ್ಟು ವರ್ಧನೆಯಾಗಿದೆ ಎಂಬುದನ್ನು ಗೋಳೀಯ ದರ್ಪಣದಿಂದ ಉಂಟಾದ ವರ್ಧನೆ ಎನ್ನುವರು. ಇದನ್ನು ಸಾಮಾನ್ಯವಾಗಿ 'm' ಅಕ್ಷರದಿಂದ ಸೂಚಿಸುವರು.

ವಸ್ತುವಿನ ಎತ್ತರ h ಹಾಗೂ ಪ್ರತಿಬಿಂಬದ ಎತ್ತರ h' ಆಗಿದ್ದರೆ, ಗೋಳೀಯ ದರ್ಪಣದಿಂದ ಉಂಟಾದ ವರ್ಧನೆ 'm' ಯು

$$m = \frac{\text{ಪ್ರತಿಬಿಂಬದ ಎತ್ತರ } (h')}{\text{ವಸ್ತುವಿನ ಎತ್ತರ } (h)}$$

ವರ್ಧನೆ 'm' ಯು ವಸ್ತು ದೂರ (u) ಮತ್ತು ಪ್ರತಿಬಿಂಬ ದೂರ (v) ಗಳ ಜೊತೆಗೆ ಸಂಬಂಧವನ್ನು ಸಹ ಹೊಂದಿದೆ. →

$$\text{ವರ್ಧನೆ } (m) = \frac{h'}{h} = -\frac{v}{u}$$

ವರ್ಧನೆಯಲ್ಲಿ ಋಣಾತ್ಮಕ ಚಿಹ್ನೆಯು ಪ್ರತಿಬಿಂಬವು ಸತ್ಯ ಪ್ರತಿಬಿಂಬ ಎಂಬುದನ್ನು ಸೂಚಿಸುತ್ತದೆ.

ವರ್ಧನೆಯಲ್ಲಿ ಧನಾತ್ಮಕ ಚಿಹ್ನೆಯು ಪ್ರತಿಬಿಂಬವು ಮಿಥ್ಯ ಪ್ರತಿಬಿಂಬ ಎಂಬುದನ್ನು ಸೂಚಿಸುತ್ತದೆ.

ಮಿಥ್ಯ ಪ್ರತಿಬಿಂಬಗಳಿಗೆ ವಸ್ತುವಿನ ಎತ್ತರವನ್ನು ಧನಾತ್ಮಕವಾಗಿ ತೆಗೆದುಕೊಳ್ಳಬೇಕು. ಆದರೆ, ಸತ್ಯ ಪ್ರತಿಬಿಂಬಗಳಿಗೆ ಋಣಾತ್ಮಕವಾಗಿ ತೆಗೆದುಕೊಳ್ಳಬೇಕು

**ಸಮತಲ ದರ್ಪಣದ ಉಪಯೋಗ.** ಕನ್ನಡಿ ತಯಾರಿಸಲು, ಸೌರ ಕುಕ್ಕರ್ ನಲ್ಲಿ

**ನಿಮ್ನ ದರ್ಪಣದ ಉಪಯೋಗ.** ತಪಾಸಣಾ ದೀಪ, ಟಾರ್ಚ್ ,ವಾಹನಗಳ ಮುಂಭಾಗದ ದೀಪ, ಕ್ಷೌರ ದರ್ಪಣ, ದಂತ ಚಿಕಿತ್ಸೆಗಳಲ್ಲಿ

**ಪೀನ ದರ್ಪಣದ ಉಪಯೋಗ** ವಾಹನಗಳ ಹಿನ್ನೋಟ ದರ್ಪಣವಾಗಿ ಉಪಯೋಗಿಸುತ್ತಾರೆ .ಕಾರಣ ಅದು ಚಿಕ್ಕದಾದ ಮತ್ತು ನೇರ ಪ್ರತಿಬಿಂಬವನ್ನು ಉಂಟುಮಾಡುತ್ತದೆ.ಸಮತಲ ದರ್ಪಣಕ್ಕೆ ಹೋಲಿಸಿದರೆ ಚಾಲಕರಿಗೆ ಹಿಂಭಾಗದ ಹೆಚ್ಚಿನ ಕ್ಷೇತ್ರವನ್ನು ವೀಕ್ಷಿಸಲು ಸಹಾಯಕವಾಗಿದೆ.

**ಬೆಳಕಿನ ವಕ್ರೀಭವನ** ಬೆಳಕು ಒಂದು ಮಾಧ್ಯಮದಿಂದ ಇನ್ನೊಂದು ಮಾಧ್ಯಮಕ್ಕೆ ಓರೆಯಾಗಿ ಚಲಸುವಾಗ, ಎರಡನೆ ಮಾಧ್ಯಮದಲ್ಲ ಪ್ರಸರಣ ದಿಕ್ಕು ಬದಲಾಗುತ್ತದೆ. ಈ ವಿದ್ಯಮಾನವನ್ನು ಬೆಳಕಿನ ವಕ್ರೀಭವನ ಎನ್ನುವರು. “

ಉದಾ:1 ನೀರು ತುಂಬಿರುವ ತೊಟ್ಟಿ ಅಥವಾ ಕೆರೆಗಳ ತಳಭಾಗವು ಮೇಲೆ ಬಂದಂತೆ ಕಾಣುತ್ತದೆ. 2 ನೀರು ತುಂಬಿದ ಗಾಜಿನ ಪಾತ್ರೆಯಲ್ಲಿ ಭಾಗಶಃ ಮುಳುಗಿದ ಪೆನ್ಸಿಲ್ ನೀರು ಮತ್ತು ಗಾಳಿ ಹೊಂದಿಕೊಂಡಿರುವ ಮೇಲ್ಮೈನಲ್ಲಿ ಬಾಗಿದಂತೆ ಕಾಣುತ್ತದ 3 ನೀರು ತುಂಬಿದ ಗಾಜಿನಪಾತ್ರೆಯಲ್ಲಿ ಇಟ್ಟಿರುವ ನಿಂಬೆಯನ್ನು ಪಕ್ಕದಿಂದ ಗಮನಿಸಿದಾಗ ಅದು ಅದರ ನೈಜ ಗಾತ್ರಕ್ಕಿಂತ ದೊಡ್ಡದಾಗಿ ಕಾಣುತ್ತದೆ




ಬಿಂದು O ನಲ್ಲಿ ಬೆಳಕಿನ ಕಿರಣವು ವಿರಳ ಮಾಧ್ಯಮದಿಂದ ಸಾಂದ್ರ ಮಾಧ್ಯಮದಲ್ಲಿ ಅಂದರೆ ಗಾಳಿ ಮಾಧ್ಯಮದಿಂದ ಗಾಜಿನ ಮಾಧ್ಯಮವನ್ನು ಪ್ರವೇಶಿಸಿದೆ.
O' ನಲ್ಲಿ ಬೆಳಕಿನ ಕಿರಣವುಗಾಜಿನ ಮಾಧ್ಯಮದಿಂದ ಗಾಳಿಯ ಮಾಧ್ಯಮಕ್ಕೆ ಅಂದರೆ ಸಾಂದ್ರ ಮಾಧ್ಯಮದಿಂದ ವಿರಳ ಮಾಧ್ಯಮವನ್ನು ಪ್ರವೇಶಿಸುತ್ತದೆ. ಬೆಳಕಿನ ಕಿರಣವು ಲಂಬದಿಂದ ದೂರ ಬಾಗುತ್ತದೆ

ಆಯತಾಕಾರದ ಗಾಜಿನ ಚಪ್ಪಡಿಯ ಸಮಾಂತರ ಅಭಿಮುಖ ಮುಖಗಳಾದ AB (ಗಾಳಿ–ಗಾಜು ಸಂಪರ್ಕ ಮಾಧ್ಯಮ) ಮತ್ತು CD (ಗಾಜು–ಗಾಳಿ ಸಂಪರ್ಕ ಮಾಧ್ಯಮ) ಮಾಧ್ಯಮಗಳಲ್ಲಿ ಬೆಳಕಿನ ಕಿರಣದ ಬಾಗುವಿಕೆಯು ಸಮ ಮತ್ತು ವಿರುದ್ಧವಾಗಿರುತ್ತದೆ.

**ವಕ್ರೀಭವನವು** ಬೆಳಕಿನ ಕಿರಣವು ಪಾರದರ್ಶಕ ಮಾಧ್ಯಮದಿಂದ ಮತ್ತೊಂದನ್ನು ಪ್ರವೇಶಿಸಿದಾಗ ವೇಗದಲ್ಲಿನ ಬದಲಾವಣೆಯಿಂದ ಸಂಭವಿಸುತ್ತದೆ

**ಬೆಳಕಿನ ವಕ್ರೀಭವನದ ನಿಯಮಗಳು.(1)** ಪತನ ಕಿರಣ, ವಕ್ರಿಮ ಕಿರಣ ಮತ್ತು ಎರಡು ಮಾಧ್ಯಮಗಳ ಸಂಪರ್ಕ ಮೇಲ್ಮೈಗೆ, ಪತನ ಬಿಂದುವಿನಲ್ಲಿ ಎಳೆದ ಲಂಬ ಎಲ್ಲವೂ ಒಂದೇ ಸಮತಲದಲ್ಲಿರುತ್ತದೆ. *(2)* ಕೊಟ್ಟಿರುವ ಬೆಳಕಿನ ನಿರ್ದಿಷ್ಟ ಬಣ್ಣ ಮತ್ತು ನೀಡಿರುವ ಜೋಡಿ ಮಾಧ್ಯಮಗಳಿಗೆ ಪತನಕೋನದ ಸೈನು ಮತ್ತು ವಕ್ರಿಮ ಕೋನದ ಸೈನುಗಳ ನಿಷ್ಪತ್ತಿಯು (ಅನುಪಾತ) ಸ್ಥಿರವಾಗಿರುತ್ತದೆ. ಇದನ್ನು ಸ್ನೆಲ್‌ನ ವಕ್ರೀಭವನದ ನಿಯಮ ಎನ್ನುವರು.

i ಪತನ ಕೋನ ಮತ್ತು r ವಕ್ರೀಭವನ ಕೋನ ಆದಾಗ :–

$$\frac{\sin i}{\sin r} = \text{ಸ್ಥಿರಾಂಕ}$$

ಈ ಸ್ಥಿರಾಂಕ ಬೆಲೆಯನ್ನು ವಕ್ರೀಭವನ ಸೂಚ್ಯಂಕ ಎನ್ನುವರು.

ಎರಡು ಮಾಧ್ಯಮಗಳಿಗೆ ಸಂಬಂಧಿಸಿದಂತೆ ದಿಕ್ಕಿನ ಬದಲಾವಣೆಯಲ್ಲಿ ಉಂಟಾದ ಪ್ರಮಾಣವನ್ನು ವಕ್ರೀಭವನ ಸೂಚ್ಯಂಕ (refractive index)ದಿಂದ ಸೂಚಿಸಬಹುದು.

ಬೆಳಕು ನಿರ್ವಾತ ಪ್ರದೇಶದಲ್ಲಿ ಅತೀ ಹೆಚ್ಚು ಅಂದರೆ $3\times10^{8}$ ms–1 ವೇಗದಲ್ಲಿ ಚಲಿಸುತ್ತದೆ. ಗಾಳಿಯಲ್ಲಿ, ಬೆಳಕಿನ ವೇಗವು ನಿರ್ವಾತದಲ್ಲಿನ ವೇಗಕ್ಕಿಂತ ಸ್ವಲ್ಪ ಕಡಿಮೆ. ಗಾಜು ಅಥವಾ ನೀರಿನಲ್ಲಿ ಇದು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ

ನೀರಿನ ವಕ್ರೀಭವನ ಸೂಚ್ಯಂಕವು $nw = 1.33$ ಇರುವುದು ಇದರ ಅರ್ಥವೇನೆಂದರೆ ಗಾಳಿಯಲ್ಲಿ ಬೆಳಕಿನ ವೇಗ ಮತ್ತು ನೀರಿನಲ್ಲಿ ಬೆಳಕಿನ ವೇಗಗಳ ಅನುಪಾತ 1.33 ಇದೆ.

ಗೋಳೀಯ ಮಸೂರಗಳಿಂದ ವಕ್ರೀಭವನ.




(a) ಪೀನ ಮಸೂರದ ಕೇಂದ್ರೀಕರಿಸುವ ಕ್ರಿಯೆ (b) ನಿಮ್ನ ಮಸೂರದ ವಿಕೇಂದ್ರೀಕರಿಸುವ ಕ್ರಿಯೆ

**ಮಸೂರ.** ಎರಡು ಮೇಲ್ಮೈಗಳಿಂದ ಆವರಿಸಿದ ಒಂದು ಪಾರದರ್ಶಕ ವಸ್ತುವಿನ, ಯಾವುದಾದರು ಒಂದು ಮೇಲ್ಮೈ ಅಥವಾ ಎರಡು ಮೇಲ್ಮೈಗಳು ಗೋಳೀಯವಾಗಿದ್ದರೆ, ಅದು ಮಸೂರ.(ಮಸೂರದ ಕನಿಷ್ಟ ಒಂದು ಮೇಲ್ಮೈಯಾದರು ಗೋಳೀಯವಾಗಿರುತ್ತದೆ. ಇಂತಹ ಮಸೂರಗಳಲ್ಲ ಇನ್ನೊಂದು ಮೇಲ್ಮೈ ಸಮತವಾಗಿರಬಹುದು.)

ದ್ವಿಪೀನ ಮಸೂರ (ಪೀನ ಮಸೂರ) ಒಂದು ಮಸೂರವು ಹೊರಬಾಗಿದ(ಹೊರವಕ್ರ) ಎರಡೂ ಗೋಲೀಯ ಮೇಲ್ಮೈಗಳನ್ನು ಹೊಂದಿರಬಹುದು. ಇಂತಹ ಮಸೂರಗಳನ್ನು ದ್ವಿಪೀನ ಮಸೂರ ಎನ್ನುವರು.ಸಾಮಾನ್ಯವಾಗಿ ಇದನ್ನು ಪೀನ ಮಸೂರ ಎನ್ನುವರು.

ಪೀನ ಮಸೂರಗಳನ್ನು ಕೇಂದ್ರೀಕರಿಸುವ ಮಸೂರಗಳು ಎನ್ನುವರು.

ದ್ವಿನಿಮ್ನ ಮಸೂರ(ನಿಮ್ನ ಮಸೂರ) ದ್ವಿನಿಮ್ನ ಮಸೂರವು ಒಳಬಾಗಿದ(ಒಳವಕ್ರ) ಎರಡು ಗೋಳೀಯ ಮೇಲ್ಮೈಗಳಿಂದ ಆವರಿಸಿದೆ. ಇದು ಮಧ್ಯಭಾಗಕ್ಕಿಂತ ಅಂಚುಗಳಲ್ಲಿ ಹೆಚ್ಚು ದಪ್ಪನಾಗಿದೆ. ಇಂತಹ ಮಸೂರಗಳನ್ನು ವಿಕೇಂದ್ರೀಕರಿಸುವ ಮಸೂರಗಳು ಎನ್ನುವರು. ದ್ವಿನಿಮ್ನ ಮಸೂರವನ್ನು ಸಾಮಾನ್ಯವಾಗಿ ನಿಮ್ನ ಮಸೂರ ಎನ್ನುವರು.

ಮಸೂರದ ಪ್ರಧಾನ ಸಂಗಮ ಪೀನ ಮಸೂರದ ಮೇಲೆ ಪ್ರಧಾನಾಕ್ಷಕ್ಕೆ ಸಮಾಂತರವಾಗಿ ಅನೇಕ ಕಿರಣಗಳು ಮಸೂರದಿಂದ ವಕ್ರೀಭವಿಸಿದ ನಂತರ ಪ್ರಧಾನ ಅಕ್ಷದ ಒಂದು ಬಿಂದುವಿನಲ್ಲಿ ಕೇಂದ್ರಿಕರಿಸಲ್ಪಡುತ್ತವೆ. ಪ್ರಧಾನ ಅಕ್ಷದ ಮೇಲಿನ ಈ ಬಿಂದುವನ್ನು ಮಸೂರದ ಪ್ರಧಾನ ಸಂಗಮ ಎನ್ನುವರು.

ನಿಮ್ನ ಮಸೂರದ ಪ್ರಧಾನ ಸಂಗಮ ಪ್ರಧಾನಾಕ್ಷಕ್ಕೆ ಸಮಾಂತರವಾಗಿರುವ ಹಲವಾರು ಕಿರಣಗಳು ನಿಮ್ನ ಮಸೂರದ ಮೇಲೆ ವಕ್ರೀಭವನಗೊಂಡ ನಂತರ, ಪ್ರಧಾನಾಕ್ಷದಿಂದ ವಿಕೇಂದ್ರೀಕರಿಸಿದಂತೆ ಭಾಸವಾಗುತ್ತವೆ. ಪ್ರಧಾನಾಕ್ಷದ ಮೇಲಿನ ಈ ಬಿಂದುವನ್ನು ನಿಮ್ನ ಮಸೂರದ ಪ್ರಧಾನ ಸಂಗಮ ಎನ್ನುವರು.

ವಸ್ತುವಿನ ವಿಭಿನ್ನ ಸ್ಥಾನಗಳಿಗೆ ನಿಮ್ನ ಮಸೂರದಿಂದ ಉಂಟಾದ ಪ್ರತಿಬಿಂಬದ ಸ್ವಭಾವ, ಸ್ಥಾನ ಮತ್ತು ಸಾಪೇ

| ವಸ್ತುವಿನ ಸ್ಥಾನ | ಪ್ರತಿಬಿಂಬದ ಸ್ಥಾನ | ಪ್ರತಿಬಿಂಬದ ಸಾಪೇಕ್ಷ ಗಾತ್ರ | ಪ್ರತಿಬಿಂಬದ ಸ್ವಭಾವ |
|---|---|---|---|
| ಅನಂತ ದೂರದಲ್ಲಿ | ಪ್ರಧಾನ ಸಂಗಮ $F_1$ ನಲ್ಲಿ | ಅತ್ಯಂತ ಚಿಕ್ಕದಾದ, ಚುಕ್ಕೆ ಗಾತ್ರದಷ್ಟು | ಮಿಥ್ಯ ಮತ್ತು ನೇರ |
| ಅನಂತ ದೂರ ಮತ್ತು ದೃಕ ಕೇಂದ್ರ O ಗಳ ನಡುವೆ | ಪ್ರಧಾನ ಸಂಗಮ $F_1$ ಮತ್ತು ದೃಕ್ ಕೇಂದ್ರ O ಗಳ ನಡುವೆ | ಚಿಕ್ಕದು | ಮಿಥ್ಯ ಮತ್ತು ನೇರ |

ಗೋಳೀಯ ಮಸೂರಗಳಿಗೆ ಸಾಂಪ್ರದಾಯಿಕ ಸಂಕೇತಗಳು ಪೀನ ಮಸೂರದ ಸಂಗಮ ದೂರವು ಧನಾತ್ಮಕವಾಗಿರುತ್ತದೆ ಹಾಗೂ ನಿಮ್ನ ದರ್ಪಣದಲ್ಲಿ ಸಂಗಮ ದೂರವು ಋಣಾತ್ಮಕವಾಗಿರುತ್ತದೆ

ಮಸೂರದ ಸೂತ್ರ ಮತ್ತು ವರ್ಧನೆ ಮಸೂರದ ಸೂತ್ರವು ವಸ್ತು ದೂರ $u$, ಪ್ರತಿಬಿಂಬ ದೂರ $v$, ಮತ್ತು ಸಂಗಮ ದೂರ $f$ ಗಳ ನಡುವೆ ಸಂಬಂಧವನ್ನು ಕಲ್ಪಿಸುತ್ತದೆ

$$\frac{1}{v} - \frac{1}{u} = \frac{1}{f}$$

$$\text{ವರ್ಧನೆ } m = \frac{\text{ಪ್ರತಿಬಿಂಬದ ಎತ್ತರ}}{\text{ವಸ್ತುವಿನ ಎತ್ತರ}} = \frac{h'}{h}$$

ವರ್ಧನೆ ಒಂದು ಮಸೂರದಿಂದ ಉಂಟಾದ ವರ್ಧನೆಯನ್ನು (Magnification) ಪ್ರತಿಬಿಂಬದ ಎತ್ತರ ಮತ್ತು ವಸ್ತುವಿನ ಎತ್ತರಗಳ ಅನುಪಾತಗಳ ರೂಪದಲ್ಲಿ ವ್ಯಕ್ತಪಡಿಸಲಾಗುತ್ತದೆ.

ವರ್ಧನೆಯನ್ನು m ಅಕ್ಷರ ದಿಂದ ಗುರುತಿಸುವರು. ವಸ್ತುವಿನ ಎತ್ತರ h ಆಗಿದ್ದಲ್ಲಿ h' ಮಸೂರದಿಂದ ಉಂಟಾದ ಪ್ರತಿಬಿಂಬದ ಎತ್ತರವಾಗಿರಲಿ.

ಮಸೂರದ ಸಾಮಥ್ಯ ಯಾವುದೇ ಮಸೂರವು ಬೆಳಕಿನ ಕಿರಣಗಳನ್ನು ಕೇಂದ್ರೀಕರಿಸುವ (ಒಂದುಗೂಡಿಸುವ) ಅಥವಾ ವಿಕೇಂದ್ರೀಕರಿಸುವ ಸಾಮರ್ಥ್ಯವು ಅದರ ಸಂಗಮ ದೂರವನ್ನು ಅವಲಂಬಿಸಿರುತ್ತದೆ.

ಉದಾಹರಣೆಗೆ, 1 ಕಡಿಮೆ ಸಂಗಮದೂರವನ್ನು ಹೊಂದಿರುವ ಒಂದು ಪೀನ ಮಸೂರವು ಬೆಳಕಿನ ಕಿರಣಗಳನ್ನು ವಿಶಾಲ ಕೋನಗಳೊಂದಿಗೆ ಬಾಗಿಸಿ ಅವುಗಳನ್ನು ದೃಕ್ ಕೇಂದ್ರದ ಹತ್ತಿರ ಕೇಂದ್ರೀಕರಿಸುತ್ತವೆ.

ಉದಾಹರಣೆಗೆ, 2 ಕಡಿಮೆ ಸಂಗಮದೂರವನ್ನು ಹೊಂದಿರುವ ಒಂದು ನಿಮ್ನ ಮಸೂರವು ಹೆಚ್ಚು ಸಂಗಮದೂರವನ್ನು ಹೊಂದಿರುವ ಮಸೂರಕ್ಕಿಂತ ಹೆಚ್ಚಿನ ವಿಕೇಂದ್ರೀಕರಣವನ್ನು ಉಂಟುಮಾಡುತ್ತದೆ.

ಮಸೂರದ ಮೂಲಕ ಬೆಳಕಿನ ಕೇಂದ್ರೀಕರಿಸುವ ಅಥವಾ ವಿಕೇಂದ್ರೀಕರಿಸುವ ಮಟ್ಟವನ್ನು ಅದರ ಸಾಮರ್ಥ್ಯದಲ್ಲಿ ವ್ಯಕ್ತಪಡಿಸಲಾಗುತ್ತದೆ.

ಸಾಮರ್ಥ್ಯವು (Power of a lens) ಅದರ ಸಂಗಮದೂರಕ್ಕೆ ವಿಲೋಮಾನುಪಾತದಲ್ಲಿದೆ.

$f$ ಸಂಗಮದೂರವನ್ನು ಹೊಂದಿರುವ ಮಸೂರದ ಸಾಮರ್ಥ್ಯ P ಯು, $P = \frac{1}{f}$

ವಜ್ರದ ವಕ್ರೀಭವನ ಸೂಚ್ಯಾಂಕ 2.42 ಇದರರ್ಥ ಬೆಳಕಿನ ವೇಗವು ವಜ್ರದಲ್ಲಿ ಗಾಳಿ/ನಿರ್ವಾತಕ್ಕಿಂತಾ 2.42 ರಷ್ಟು ಕಡಿಮೆ ಇದೆ ಎಂದರ್ಥ

ಮಸೂರದ ಸಾಮರ್ಥ್ಯದ SI ಏಕಮಾನ "ಡಯಾಪ್ಟರ್" (Diaptre). ಇದನ್ನು ಆ ಅಕ್ಷರದಿಂದ ಸೂಚಿಸುವರು. 1 ಮೀಟರ್ ಸಂಗಮ ದೂರವನ್ನು ಹೊಂದಿರುವ ಮಸೂರದ ಸಾಮರ್ಥ್ಯ $1D = 1m^{-1}$. ಎಂದರೆ ಮಸೂರದ ಸಾಮಥ್ಯ 1ಮೀಟರ್ ಸಂಗಮ ದೂರವಿದೆ ಎಂದರ್ಥ.

ಪೀನ ಮಸೂರದ ಸಾಮರ್ಥ್ಯವು ಧನಾತ್ಮಕವಾಗಿಯೂ ಹಾಗೂ ನಿಮ್ನ ಮಸೂರದ ಸಾಮರ್ಥ್ಯವು ಋಣಾತ್ಮಕವಾಗಿಯೂ ಸೂಚಿಸುವರು.

ದೃಷ್ಟಿಮಾಪನಗಾರರು (ಕನ್ನಡಕಗಳನ್ನು ತಯಾರಿಸುವವರು) ಸರಿಪಡಿಸುವ ಮಸೂರಗಳನ್ನು (corrective lenses) ಸೂಚಿಸುವಾಗ ಅವುಗಳ ಸಾಮರ್ಥ್ಯದ ಮೂಲಕ ಸೂಚಿಸುತ್ತಾರೆ.

ಮಸೂರದ ಸಾಮರ್ಥ್ಯವು +2.0 ಆ. ಇದರ ಅರ್ಥ ಸೂಚಿಸಿರುವ ಮಸೂರವು ಪೀನ ಮಸೂರವಾಗಿದೆ. ಮಸೂರದ ಸಂಗಮ ದೂರವು +0.50 m; ಇದೇ ರೀತಿ, ಮಸೂರದ ಸಾಮರ್ಥ್ಯವು −2.5D ಆದಾಗ ಸಂಗಮ ದೂರವು −0.40 m ಇರುತ್ತದೆ. ಮಸೂರವು ನಿಮ್ನ ಮಸೂರವಾಗಿರುತ್ತದೆ.

ಒಂದು ಸಮತಲ ದರ್ಪಣದ ಸಾಮಥ್ಯ +1 ಇದರ ಅರ್ಥ ಪ್ರತಿಬಿಂಬದ ಗಾತ್ರವು ವಸ್ತುವಿನಷ್ಟೇ ಇದ್ದು ನೇರ ಮಿಥ್ಯ(ತಲೆ ಕೆಳಗಾದ ) ಪ್ರತಿಬಿಂಬವಾಗಿದೆ

ಸತ್ಯ ಪ್ರತಿಬಿಂಬವನ್ನು ಪರದೆಯ ಮೇಲೆ ಪಡೆಯಬಹುದು ಸತ್ಯ ಪ್ರತಿಬಿಂಬವೂ ದರ್ಪಣದ ಮುಂಭಾಗದಲ್ಲಿ ಉಂಟಾಗುತ್ತದೆ

ಮಿಥ್ಯ ಪ್ರತಿಬಿಂಬ ಮಿಥ್ಯ ಪ್ರತಿಬಿಂಬವನ್ನು ಪರದೆಯ ಮೇಲೆ ಪಡೆಯಲು ಸಾಧ್ಯವಿಲ್ಲ ಮಿಥ್ಯಪ್ರತಿಬಿಂಬವೂ ದರ್ಪಣದ ಹಿಂಭಾಗದಲ್ಲಿ ಉಂಟಾಗುತ್ತದೆ .

ಸಂಗಮ ದೂರವೂ ವಕ್ರತಾ ತ್ರಿಜ್ಯದ ಅರ್ಧದಷ್ಟು ಇರುತ್ತದೆ

ಸಮತಳ ದರ್ಪಣದ ವಕ್ರತಾ ತ್ರಿಜ್ಯ ಅನಂತ ಇನ್ಫಿನಿಟಿ $\infty$

ಸಮತಲ ದರ್ಪಣದ ಸಂಗಮ ದೂರ ಅನಂತ ಇನ್ಫಿನಿಟಿ $\infty$

ವಕ್ರೀಭವನದ ಸೂಚ್ಯಂಕ ದೊಡ್ಡದಾಗಿದ್ದರೆ ಮಾಧ್ಯಮವು ದೃಕ್ ಸಾಂದ್ರವಾಗಿರುತ್ತದೆ. ಹಾಗೂ ಚಿಕ್ಕದಾಗಿದ್ದರೆ ದೃಕ್ ವಿರಳವಾಗಿರುತ್ತದೆ.

ಪೀನ ಮಸೂರವು ಒಂದು ವರ್ಧನ ಮಾಸೂರವಾಗಿದೆ .

ವಸ್ತುವಿನ ನೇರ ಮತ್ತು ದೊಡ್ಡದಾದ ಪ್ರತಿಬಿಂಬವನ್ನು ನೀಡುವ ದರ್ಪಣ ನಿಮ್ನ ದರ್ಪಣ

ಗಾಳಿಯಲ್ಲಿ ಚಲಿಸುತ್ತಿರುವ ಬೆಳಕಿನ ಬಂದು ಕಿರಣವು ಓರೆಯಾಗಿ ನೀರನ್ನು ಪ್ರವೇಶಿಸುತ್ತದೆ ಬೆಳಕಿನ ಕೆಲವು ಲಂಬದ ಕಡೆಗೆ ಬಾಗುತ್ತದೆ ಏಕೆಂದರೆ ಬೆಳಕಿನ ವೇಗವು ವಿರಳ ಮಾಧ್ಯಮಕ್ಕಿಂತಾ ಸಾಂದ್ರ ಮಾಧ್ಯಮದಲ್ಲಿ ಕಡಿಮೆಯಾಗಿರುತ್ತದೆ

ಹೆಚ್ಚಿನ ದೃಕ್ ಸಾಂದ್ರತೆಯನ್ನು ಹೊಂದಿರುವ ಮಾಧ್ಯಮ ವಜ್ರ

ಅತಿ ಕಡಿಮೆ ದೃಕ್ ಸಾಂದ್ರತೆಯನ್ನು ಹೊಂದಿರುವ ಮಾಧ್ಯಮ ಗಾಳಿ .

ಬೆಳಕು ಕಡಿಮೆ ವಕ್ರೀಭವನ ಸೂಚ್ಯಂಕ ಹೊಂದಿದ ಮಾಧ್ಯಮದಲ್ಲಿ ವೇಗವಾಗಿ ಚಲಿಸುತ್ತದೆ ಉದಾಹರಣೆ ಗಾಳಿಯಲ್ಲಿ ಬೆಳಕು ವೇಗವಾಗಿ ಚಲಿಸುತ್ತದೆ .

ಸಮತಲ ಮತ್ತು ಪೀನ ದರ್ಪಣದಿಂದ ಎಷ್ಟು ದೂರದಲ್ಲಿ ನಿಂತರೂ ಪ್ರತಿಬಿಂಬ ನೇರವಾಗಿ ರುತ್ತದೆ.

ಸತ್ಯ ಮತ್ತು ವಸ್ತುವಿನ ಗಾತ್ರದಷ್ಟೇ ಪ್ರತಿಬಿಂಬವನ್ನು ಪಡೆಯಲು ವಸ್ತುವನ್ನು ಪೀನ ಮಸೂರದ ಮುಂಭಾಗದಲ್ಲಿ ಸಂಗಮ ದೂರದ ಎರಡು ರಷ್ಟು ದೂರದಲ್ಲಿ ಇರಿಸಬೇಕು .

ನಿಮ್ನ ದರ್ಪಣ ದಿಂದ ಉಂಟಾದ ಪ್ರತಿಬಿಂಬವೂ ಮಿತ್ಯ ನೇರ ಮತ್ತು ವಸ್ತುವಿಗಿಂತಾ ದೊಡ್ಡದಾಗಿದೆ ಹಾಗಾದರೆ ವಸ್ತುವನ್ನು ಧ್ರುವ ಮತ್ತು ಪ್ರಧಾನ ಸಂಗಮದ ನಡುವೆ ಇರಿಸಬೇಕು.

*ಶಬ್ದಕೋಶಗಳಲ್ಲಿ ಇರುವ ಚಿಕ್ಕ ಅಕ್ಷರಗಳನ್ನು ಓದಲು* ಕಡಿಮೆ ಸಂಗಮ ದೂರವನ್ನು ಹೊಂದಿರುವ ಪೀನ ಮಸೂರವನ್ನು ಉಪಯೋಗಿಸುತ್ತಾರೆ .

ಕಾರಿನ ಹೆಡ್ಲೈಟ್ ಮುಂಭಾಗದ ದೀಪ ದಲ್ಲಿ ನಿಮ್ನ ದರ್ಪಣ ಬಳಸುತ್ತಾರೆ ಕಾರಣ ಹೆಡ್ಲೈನ್ಗಳಲ್ಲಿ ಬಲ್ಬನ್ನು ದರ್ಪಣದ ಸಂಗಮದಲ್ಲಿ ಇರಿಸಿದಾಗ ಹೊರಹೊಮ್ಮುವ ಬೆಳಕು ಪ್ರತಿಫಲನದ ನಂತರ ಸಮಾನಾಂತರ ಕಿರಣಗಳ ಪುಂಜವಾಗಿ ಹೊರಹೊಮ್ಮುತ್ತದೆ .ಇದು ಮುಂಭಾಗದ ರಸ್ತೆಯನ್ನು ಬೆಳಗುತ್ತದೆ .

ವಾಹನದ ಪಾರ್ಶ್ವ ಅಥವಾ ಹಿನ್ನೋಟದ ದರ್ಪಣವಾಗಿ ಪೀನ ದರ್ಪಣ ವನ್ನು ಬಳಸುತ್ತಾರೆ ಕಾರಣ ಪ್ರತಿಬಿಂಬವೂ ನೇರ ಮತ್ತು ಚಿಕ್ಕದಾಗಿರುತ್ತದೆ ಅಲ್ಲದೇ ಹೆಚ್ಚಿನ ಕ್ಷೇತ್ರ ವ್ಯಾಪ್ತಿಯನ್ನು ಹೊಂದಿದೆ

ಸೌರ ಕುಲುಮೆಯಲ್ಲಿ ನಿಮ್ನ ದರ್ಪಣ ವನ್ನು ಬಳಸುತ್ತಾರೆ ಕಾರಣ ಇದು ಕೇಂದ್ರೀಕರಿಸುವ ದರ್ಪಣ ವಾಗಿದ್ದು ಪ್ರಧಾನ ಸಂಗಮದಲ್ಲಿ ತಾಪವನ್ನು ಹೆಚ್ಚಿಸುತ್ತದೆ .

ಒಂದು ಪೀನ ಮಸೂರದ ಅರ್ಧ ಭಾಗವನ್ನು ಕಪ್ಪು ಕಾಗದದಿಂದ ಮುಚ್ಚಲಾಗಿದೆ ಮಸೂರವು ವಸ್ತುವಿನ ಪೂರ್ಣ ಪ್ರತಿಬಿಂಬವನ್ನು ಈ ಸಂದರ್ಭದಲ್ಲಿಯೂ ಉಂಟು ಮಾಡುತ್ತದೆ .ಕಾರಣ ಮಸೂರದ ಅರ್ಧ ಭಾಗವನ್ನು ಕಪ್ಪು ಕಾಗದದಿಂದ ಮುಚ್ಚಿದಾಗ ಇನ್ನುಳಿದ ಅರ್ಧ ಭಾಗವೂ ಬೆಳಕನ್ನು ವಕ್ರೀ ಭವಿಸಿ ಪ್ರತಿಬಿಂಬವನ್ನು ಉಂಟು ಮಾಡಲು ಸಹಾಯ ಮಾಡುತ್ತದೆ.ಆದರೆ ಪ್ರತಿಬಿಂಬದ ತೀವ್ರತೆ ಪ್ರಖರತೆಯು ಅರ್ಧದಷ್ಟು ಕಡಿಮೆಯಾಗುತ್ತದೆ

ನಿಮ್ನ ದರ್ಪಣದ ವಕ್ರತಾ ತ್ರಿಜ್ಯವು ದರ್ಪಣಕ್ಕೆ ಯಾವಾಗಲೂ ಲಂಬವಾಗಿರುತ್ತದೆ.

ಪೀನ ಮಸೂರದಿಂದ ಉಂಟಾದ ಎಲ್ಲಾ ಸತ್ಯ ಪ್ರತಿಬಿಂಬಗಳು ತಲೆ ಕೆಳಗಾಗುತ್ತದೆ

ಸರಳ ಸೂಕ್ಷ್ಮ ದಶಕದಿಂದ ಮಿತ್ಯ ಪ್ರತಿಬಿಂಬವೂ ಉಂಟಾಗುತ್ತದೆ.

ಸ್ನೆಲ್ ನ ನಿಯಮ ಬೆಳಕಿನ ವಕ್ರೀ ಭವನಕ್ಕೆ ಸಂಬಂಧಿಸಿದೆ .

*ಪತನ ಕೋನವು ಸೊನ್ನೆ ಆದಾಗ* ಪ್ರತಿಫಲನ ಸೊನ್ನೆ ಆಗಿರುತ್ತದೆ

ಪತನ ಕಿರಣ ಮತ್ತು ಪ್ರತಿಫಲಿತ ಕಿರಣಗಳ ನಡುವಿನ ಕೋನ 70 ಆಗಾಗ ಪತನ ಕೊನ 35 ಆಗಿರುತ್ತದೆ .

ವಸ್ತುವನ್ನು ಪ್ರಧಾನ ಸಂಗಮ ಮತ್ತು ಧೃವ ಗಳ ನಡುವೆ ಇರಿಸಿದಾಗ ನಿಮ್ನ ದರ್ಪಣ ದಿಂದ ಉಂಟಾದ ಪ್ರತಿಬಿಂಬವೂ ಮಿಥ್ಯ ಬಿಂಬವಾಗಿರುತ್ತದೆ.

ಪೀನ ದರ್ಪಣ ತನ್ನಿಂದ ವಸ್ತುವಿನ ಸ್ಥಾನವನ್ನು ದೂರವನ್ನು ಲೆಕ್ಕಿಸದೆ ಅದರ ಪೂರ್ಣ ಪ್ರತಿಬಿಂಬವನ್ನು ಉಂಟು ಮಾಡುತ್ತದೆ .

ಸತ್ಯ ವಸ್ತುವನ್ನು ಬಳಸಿ ನಿಮ್ನ ಮಸೂರದ ಸಹಾಯದಿಂದ ಅದರ ಸತ್ಯ ಬಿಂಬ ಪಡೆಯಲು ಸಾಧ್ಯ ಇಲ್ಲ ಕಾರಣ ನಿನ್ನ ಮಸೂರವು ಯಾವಾಗಲೂ ಮಿಥ್ಯ ಬಿಂಬಗಳನ್ನು ಉಂಟು ಮಾಡುತ್ತದೆ .

ಲೇಸರ್ ಬೆಳಕಿನ ಕಿರಣವನ್ನು ಪೀನ ಮಸೂರದ ಒಂದು ಬಿಂದುವಿನ ಮೂಲಕ ಹಾಯಿಸಿದಾಗ ಅದು ನಿರ್ಗಮನದ ನಂತರ ತನ್ನ ಮೂಲ ಪಥದಲ್ಲಿ ಚಲಿಸುತ್ತದೆ ಏಕೆಂದರೆ ಅದು ಮಸೂರದ ದೃಕ್ ಕೇಂದ್ರದ ಮೂಲಕ ಹಾಯ್ದಿರುತ್ತದೆ.

ಗಾಳಿಯಲ್ಲಿನ ಬೆಳಕಿನ ವೇಗವೂ ಮಾಧ್ಯಮದಲ್ಲಿನ ವೇಗಕ್ಕಿಂತ ಹೆಚ್ಚಾಗಿರುತ್ತದೆ ಹಾಗಾಗಿ ಮಾಧ್ಯಮದ ವಕ್ರೀಭವನ ಸುಚ್ಯಾಂಕವು ಒಂದಕ್ಕಿಂತ ಹೆಚ್ಚಾಗಿರುತ್ತದೆ .

ಗೋಳೀಯ ದರ್ಪಣ ದಿಂದ ಉಂಟಾದ ಪ್ರತಿಬಿಂಬದ ವರ್ಧನೆಯು -1(ಋಣಾತ್ಮಕ) ಹಾಗಾದರೆ ಪ್ರತಿಬಿಂಬವ ಸತ್ಯವಾಗಿರುತ್ತದೆ ಮತ್ತು ಅದು ನಿಮ್ನ ದರ್ಪಣ.

ಬಕೆಟ್ ತಳದಲ್ಲಿ ಒಂದು ನಾಣ್ಯವನ್ನು ಇಡಲಾಗಿದೆ ಇದರ ಪಕ್ಕದಲ್ಲಿ ನಿಂತಿರುವ ಒಬ್ಬ ವಿದ್ಯಾರ್ಥಿಗೆ ಅದನ್ನು ನೋಡಲು ಸಾಧ್ಯವಾಗುವುದಿಲ್ಲ ಮತ್ತೊಬ್ಬ ವಿದ್ಯಾರ್ಥಿಯೂ ನಾಣ್ಯಕ್ಕೆ ಧಕ್ಕೆಯಾಗದಂತೆ ನಿಧಾನವಾಗಿ ನೀರನ್ನು ಸುರಿಯುತ್ತಾನೆ ಈಗ ಮೊದಲನೆಯ ವಿದ್ಯಾರ್ಥಿಯು ತಾನು ಇದ್ದ ಸ್ಥಾನದಿಂದಲೇ ನಾಣ್ಯವನ್ನು ವೀಕ್ಷಿಸಲು ಸಾಧ್ಯವಾಗುತ್ತದೆ ಕಾರಣ ಬೆಳಕಿನ ವಕ್ರೀ ಭವನದಿಂದ ನಾಣ್ಯದ ನಿತ್ಯ ಪ್ರತಿಬಿಂಬವೂ ನಾಣ್ಯದ ನಿಜವಾದ ಸ್ಥಾನಕ್ಕಿಂತ ಸ್ವಲ್ಪ ಮೇಲ್ಭಾಗದಲ್ಲಿ ನೀರಿನ ಮೇಲ್ಮೈನ ಹತ್ತಿರ ಉಂಟಾಗುವುದರಿಂದ ಬಕೆಟ್ ನೀರಿನ್ನು ಸುರಿದ ತಕ್ಷಣ ವಿದ್ಯಾರ್ಥಿ ವೀಕ್ಷಿಸಲು ಸಾಧ್ಯವಾಗುತ್ತದೆ .

ಸಂಗಮ ದೂರವೂ ಋಣಾತ್ಮಕವಾಗಿ ದ್ದರೆ ನಿಮ್ನ ಮಸೂರವನ್ನು ಬಳಸಬೇಕಾಗುತ್ತದೆ .

ಸಂಗಮ ದೂರವೂ ಧನಾತ್ಮಕವಾಗಿದ್ದರೆ ಕೇಂದ್ರೀಕರಿಸುವ ಮಸೂರ(ಪೀನ ಮಸೂರ ) ಬಳಸಬೇಕಾಗುತ್ತದೆ.

ಪ್ರತಿಬಿಂಬದ ಗಾತ್ರವೂ ವಸ್ತುವಿನ ಗಾತ್ರದಷ್ಟೇ ಇದ್ದರೆ ಧನಾತ್ಮಕ ಚಿಹ್ನೆಯು ಪ್ರತಿಬಿಂಬವು ನೇರ ಮತ್ತು ಮಿತ್ಯವಾಗಿರುವುದನ್ನು ಸೂಚಿಸುತ್ತದೆ .

ಒಂದು ಹೊಸ ಸ್ಟೀಲ್ ಚಮಚದಲ್ಲಿ ನೀವು ನಿಮ್ಮ ತಲೆಕೆಳಗಾದ ಪ್ರತಿಬಿಂಬವನ್ನು ನೋಡಿದರೆ ಚಮಚದ ಆ ಭಾಗವು ನಿಮ್ನ ದರ್ಪಣವಾಗಿ ವರ್ತಿಸುತ್ತಿರುತ್ತದೆ

ಸ್ತಬ್ಧ ಮೇಲ್ಮೈ ಇರುವ ನೀರಿನಲ್ಲಿ ನೀವು ನಿಮ್ಮ ಪ್ರತಿಬಿಂಬ ಕಾಣಬಹುದು ಅದರ ಮೇಲ್ಮೈಯನ್ನು ಕದಡಿದಾಗ ನಿಮ್ಮ ಪ್ರತಿಬಿಂಬ ಸ್ಪಷ್ಟವಾಗಿರುವುದಿಲ್ಲ ಇದಕ್ಕೆ ಕಾರಣ ಅನಿಯತ ಪ್ರತಿಫಲನ

ಒಂದು ಬೆಳಕಿನ ಕಿರಣವು ಸಾಂದ್ರ ಮಾಧ್ಯಮದಿಂದ ವಿರಳ ಮಾಧ್ಯಮದೆಡೆಗೆ ಸಾಗುವಾಗ ಆಪಾತ ಕೋನವು ಕ್ರಾಂತಿ ಕೋನಕ್ಕಿಂತಾ ಹೆಚ್ಚಾದಾಗ ಉಂಟಾಗುವ ಪರಿಣಾಮ ಸಂಪೂರ್ಣ ಆಂತರಿಕ ಪ್ರತಿಫಲನ.



ಚಿತ್ರ 10.7 ನಿಮ್ನ ದರ್ಪಣದಿಂದ ಉಂಟಾದ ಪ್ರತಿಬಿಂಬಗಳ ರೇಖಾ ಚಿತ್ರಗಳು.

ಕೋಷ್ಟಕ 10.1 ವಸ್ತುವಿನ ಸ್ಥಾನವನ್ನು ಆಧರಿಸಿ ವಿವಿಧ ಸ್ಥಾನಗಳಲ್ಲಿ ನಿಮ್ನ ದರ್ಪಣದಿಂದ ಪ್ರತಿಬಿಂಬ ರಚನೆ.

| ವಸ್ತುವಿನ ಸ್ಥಾನ | ಪ್ರತಿಬಿಂಬದ ಸ್ಥಾನ | ಪ್ರತಿಬಿಂಬದ ಗಾತ್ರ | ಪ್ರತಿಬಿಂಬದ ಸ್ವಭಾವ |
|---|---|---|---|
| ಅನಂತದಲ್ಲಿ | ಸಂಗಮ ಬಿಂದು F ನಲ್ಲಿ | ಅತ್ಯಂತ ಚಿಕ್ಕದಾದ, ಚುಕ್ಕೆ ಗಾತ್ರದಷ್ಟು | ಸತ್ಯ ಮತ್ತು ತಲೆಕೆಳಗಾದ |
| C ಯಿಂದ ದೂರದಲ್ಲಿ | F ಮತ್ತು C ಯ ನಡುವೆ | ಚಿಕ್ಕದು | ಸತ್ಯ ಮತ್ತು ತಲೆಕೆಳಗಾದ |
| C ಯಲ್ಲಿ | C ಯಲ್ಲಿ | ಅದೇ ಗಾತ್ರ | ಸತ್ಯ ಮತ್ತು ತಲೆಕೆಳಗಾದ |
| C ಮತ್ತು F ನಡುವೆ | C ಯಿಂದ ದೂರದಲ್ಲಿ | ದೊಡ್ಡದಾದ | ಸತ್ಯ ಮತ್ತು ತಲೆಕೆಳಗಾದ |
| F ನಲ್ಲಿ | ಅನಂತದೂರದಲ್ಲಿ | ಅತ್ಯಂತ ದೊಡ್ಡದಾದ | ಸತ್ಯ ಮತ್ತು ತಲೆಕೆಳಗಾದ |
| P ಮತ್ತು F ನಡುವೆ | ದರ್ಪಣದ ಹಿಂದೆ | ದೊಡ್ಡದಾದ (ವರ್ಧಿಸಿದ) | ಮಿಥ್ಯ ಮತ್ತು ನೇರವಾದ |



ಚಿತ್ರ 10.16 ವಸ್ತುವಿನ ವಿಭಿನ್ನ ಸ್ಥಾನಗಳಲ್ಲಿ ಪೀನ ಮಸೂರದಿಂದ ಉಂಟಾಗುವ ಪ್ರತಿಬಿಂಬದ ಸ್ವಭಾವ, ಸ್ಥಾನ ಮತ್ತು ಗಾತ್ರ

**ಕೋಷ್ಟಕ 10.4 ವಸ್ತುವಿನ ವಿಭಿನ್ನ ಸ್ಥಾನಗಳಿಗೆ ಪೀನ ಮಸೂರದಿಂದ ಉಂಟಾದ ಪ್ರತಿಬಿಂಬದ ಸ್ವಭಾವ, ಸ್ಥಾನ ಮತ್ತು ಸಾಪೇಕ್ಷ ಗಾತ್ರ**

| ವಸ್ತುವಿನ ಸ್ಥಾನ | ಪ್ರತಿಬಿಂಬದ ಸ್ಥಾನ | ಪ್ರತಿಬಿಂಬದ ಸಾಪೇಕ್ಷ ಗಾತ್ರ | ಪ್ರತಿಬಿಂಬದ ಸ್ವಭಾವ |
|---|---|---|---|
| ಅನಂತ ದೂರದಲ್ಲಿ | ಪ್ರಧಾನ ಸಂಗಮ $F_2$ನಲ್ಲಿ | ಅತ್ಯಂತ ಚಿಕ್ಕದಾದ, ಚುಕ್ಕೆ ಗಾತ್ರದಷ್ಟು | ಸತ್ಯ ಮತ್ತು ತಲೆಕೆಳಗಾದ |
| $2F_1$ ಗಿಂತ ದೂರದಲ್ಲಿ | $F_2$ ಮತ್ತು $2F_2$ ಗಳ ನಡುವೆ | ಚಿಕ್ಕದು | ಸತ್ಯ ಮತ್ತು ತಲೆಕೆಳಗಾದ |
| $2F_1$ ನಲ್ಲಿ | $2F_2$ ನಲ್ಲಿ | ಸಮಾನ ಗಾತ್ರ | ಸತ್ಯ ಮತ್ತು ತಲೆಕೆಳಗಾದ |
| $F_1$ ಮತ್ತು $2F_1$ ಗಳ ಮಧ್ಯೆ | $2F_2$ ಗಿಂತ ದೂರದಲ್ಲಿ | ದೊಡ್ಡದಾದ (ವರ್ಧಿಸಿದ) | ಸತ್ಯ ಮತ್ತು ತಲೆಕೆಳಗಾದ |
| ಪ್ರಧಾನ ಸಂಗಮ $F_1$ ನಲ್ಲಿ | ಅನಂತ ದೂರದಲ್ಲಿ | ಸಾಮಾನ್ಯ ರೂಪಕ್ಕಿಂತಲೂ ದೊಡ್ಡದು ಅಥವಾ ಅತ್ಯಂತ ಹೆಚ್ಚು ದೊಡ್ಡದಾದ(ವರ್ಧಿಸಿದ) | ಸತ್ಯ ಮತ್ತು ತಲೆಕೆಳಗಾದ |
| ಪ್ರಧಾನ ಸಂಗಮ $F_1$ ಮತ್ತು ದೃಕ್ ಕೇಂದ್ರ O ಗಳ ನಡುವೆ | ವಸ್ತುವಿರುವ ಮಸೂರದ ಭಾಗದಲ್ಲಿ | ದೊಡ್ಡದಾದ (ವರ್ಧಿಸಿದ) | ಮಿಥ್ಯ ಮತ್ತು ನೇರ |



ಚಿತ್ರ 10.17 : ವಸ್ತುವಿನ ವಿಭಿನ್ನ ಸ್ಥಾನಗಳಲ್ಲಿ ನಿಮ್ನ ಮಸೂರದಿಂದ ಉಂಟಾಗುವ ಪ್ರತಿಬಿಂಬದ ಸ್ವಭಾವ, ಸ್ಥಾನ ಮತ್ತು ಗಾತ್ರ



ಚಿತ್ರ 10.8 ಪೀನ ದರ್ಪಣದಿಂದ ಪ್ರತಿಬಿಂಬ ಉಂಟಾಗುವಿಕೆ

# ಅಧ್ಯಾಯ –11ಮಾನವನ ಕಣ್ಣು ಮತ್ತು ವರ್ಣಮಯ ಜಗತ್ತು 5 ಅಂಕ

ರೆಟಿನಾ ಮಾನವನ ಕಣ್ಣು ವಸ್ತುವಿನ ಪ್ರತಿಬಿಂಬವನ್ನುಂಟು ಮಾಡುವ ಭಾಗ ರೆಟಿನಾ (ಅಕ್ಷಪಟಲ)

ಕಣ್ಣಿನ ಮಸೂರವು ವಸ್ತುವಿನ ತಲೆಕೆಳಗಾದ ನೈಜ ಪ್ರತಿಬಿಂಬವನ್ನು ಅಕ್ಷಿಪಟಲದ ಮೇಲೆ ಉಂಟುಮಾಡುತ್ತದೆ

ಕಾರ್ನಿಯಾ ಬೆಳಕು ಕಣ್ಣಿನ ತೆಳುವಾದ ಪೊರೆ ಕಾರ್ನಿಯಾ ಮೂಲಕ ಕಣ್ಣನ್ನು ಪ್ರವೇಶಿಸುತ್ತದೆ.

ಕಾರ್ನಿಯಾದ ಹಿಂಭಾಗದಲ್ಲಿರುವ ರಚನೆಯ ಭಾಗ ಐರಿಸ್ (ವರ್ಣ ಪಟಲ )

ಕಣ್ಣಿನ ಪಾಪೆ ಕಣ್ಣಿನೊಳಗೆ ಪ್ರವೇಶಿಸುವ ಬೆಳಕಿನ ಪ್ರಮಾಣವನ್ನು ಕಣ್ಣಿನ ಪಾಪೆ ನಿಯಂತ್ರಿಸುತ್ತದೆ




ಕಣ್ಣನ್ನು ಪ್ರವೇಶಿಸುವ ಬೆಳಕಿನ ಕಿರಣಗಳ ಹೆಚ್ಚಿನ ವಕ್ರೀಭವನವು ಕಾರ್ನಿಯಾದ ಹೊರ ಮೇಲ್ಮೈನಲ್ಲಿ ಉಂಟಾಗುತ್ತದೆ.

ಕಣ್ಣಿನಲ್ಲಿ ವಿದ್ಯುತ್ ಸಂಕೇತಗಳನ್ನು ಮಿದುಳಿಗೆ ತಲುಪಿಸುವ ಭಾಗ ಚಾಕ್ಷುಷನರ

ಐರಿಸ್ ಎಂಬುದು ಕಡುಕಪ್ಪಾದ ಸ್ನಾಯುಗಳ ಒಂದು ಪದರವಾಗಿದ್ದು ಕಣ್ಣು ಪಾಪೆಯ ಗಾತ್ರವನ್ನು ನಿಯಂತ್ರಿಸುತ್ತದೆ.

ದೃಶ್ಯಗ್ರಾಹಕ ಕೋಶಗಳು ಬೆಳಕಿನ ಕಿರಣಗಳ ಚೋದನೆಯಿಂದ ವಿದ್ಯುತ್ ಸಂಕೇತಗಳನ್ನು ಸೃಷ್ಟಿಸುತ್ತವೆ.

ಚಾಕ್ಷುಷ ನರಗಳ optic nerves ಸಂಕೇತಗಳನ್ನು ಮೂಲಕ ಮಿದುಳಿಗೆ ತಲುಪಿಸಲಾಗುತ್ತದೆ

ಕಣ್ಣಿನ ಹೊಂದಾಣಿಕೆ ಕಣ್ಣಿನ ಹೊಂದಾಣಿಕೆ ಕಣ್ಣಿನ ಮಸೂರದ ಸಂಗಮದೂರವನ್ನು ಹೊಂದಾಣಿಕೆ ಮಾಡುವ ಕಣ್ಣಿನ ಮಸೂರದ ಸಾಮರ್ಥ್ಯವನ್ನು ಕಣ್ಣಿನ ಹೊಂದಾಣಿಕೆ ಎನ್ನುತ್ತೇವೆ.

ಕಣ್ಣಿನ ಮಸೂರದ ವಕ್ರತೆಯ ಬದಲಾವಣೆಯಿಂದ ಸಂಗಮ ದೂರ ಬದಲಾಯಿಸಬಹುದು

ಕಣ್ಣಿನ ಕನಿಷ್ಟ ದೃಷ್ಟಿ ದೂರ (ಸ್ಪಷ್ಟ ದೃಷ್ಟಿಯ ಕನಿಷ್ಟ ದೂರ ) (ಕಣ್ಣಿನ ಸಮೀಪ ಬಿಂದು ) ಪ್ರೌಢ ವಯಸ್ಕನಿಗೆ 25 ಸೆಂ. ಮೀ. ಇರಬೇಕು

ಕಣಿನ್ಣ ಗರಿಷ್ಟ ದೂರ ಬಿಂದು ಕಣ್ಣು ಸ್ಪಷ್ಟವಾಗಿ ವೀಕ್ಷಿಸಲು ಸಾಧ್ಯ ವಾಗುವ ಅತಿ ಗರಿಷ್ಟ ದೂರವನ್ನು ಕಣಿನ್ಣ ಗರಿಷ್ಟ ದೂರ ಬಿಂದು ಎನ್ನುತ್ತೇವೆ. ಇದು ಸಾಮಾನ್ಯ ಕಣ್ಣಿಗೆ ಅನಂತದೂರವಾಗಿದೆ.

ಸಾಮಾನ್ಯ ಕಣ್ಣು 25 ಸೆಂ.ಮೀ. ಮತ್ತು ಅನಂತ ದೂರದ ನಡುವಿನ ವಸ್ತುಗಳನ್ನು ಸ್ಪಷ್ಟವಾಗಿ ನೋಡುತ್ತದೆ

ಟಿಂಪಾಲ್ ಪರಿಣಾಮ ಕಲಿಲ ಪದಾರ್ಥಗಳಿಂದ ಬೆಳಗಿನ ಚದುರಿವಿಕೆಯ ವಿದ್ಯಮಾನ.

ಕಣ್ಣಿನ ಕನಿಷ್ಟ ದೃಷ್ಟಿದೂರ( ಕಣ್ಣಿನ ಸಮೀಪ ಬಿಂದು ) (ಸ್ಪಷ್ಟ ದೃಷ್ಟಿಯ ಕನಿಷ್ಟ ದೂರ ) ಕಣ್ಣಿಗೆ, ವಸ್ತುವು ಸ್ಪಷ್ಟವಾಗಿ ಹಾಗೂ ಒತ್ತಡರಹಿತವಾಗಿ ಕಾಣುವ ಕನಿಷ್ಟ ದೂರವನ್ನು ಕಣ್ಣಿನ ಕನಿಷ್ಟ ದೃಷ್ಟಿದೂರ ಎನ್ನುತ್ತೇವೆ. ಇದನ್ನು ಕಣ್ಣಿನ ಸಮೀಪ ಬಿಂದು ಎಂದೂ ಸಹ ಕರೆಯುತ್ತೇವೆ.

ಕಣ್ಣಿನ ಸಾಮಾನ್ಯ ವಕ್ರೀಭವನ ದೃಷ್ಟಿ ದೋಷಗಳ ವಿದ1. ಸಮೀಪ ದೃಷ್ಟಿ ದೋಷ ( ಮಯೋಪಿಯಾ) 2. ದೂರ ದೃಷ್ಟಿ ದೋಷ ( ಹೈಪರ್ ಮೆಟ್ರೋಪಿಯಾ)3. ಪ್ರೆಸ್ ಬಯೋಪಿಯ

ಸಮೀಪ ದೃಷ್ಟಿದೋಷ ದೂರದ ವಸ್ತುವಿನ ಪ್ರತಿಬಿಂಬವು ಸ್ಪಷ್ಟವಾಗಿ ಗೋಚರಿಸದೇ ರೆಟಿನಾದ ಮುಂಭಾಗದಲ್ಲಿ ರೂಪುಗೊಳ್ಳುತ್ತದೆ. ಇದನ್ನು ಸಮೀಪ ದೃಷ್ಟಿದೋಷ ಎನ್ನುವರು. ಇದನ್ನು ಸೂಕ್ತ ಸಾಮರ್ಥ್ಯ ನಿಮ್ನ ಮಸೂರ ಉಪಯೋಗಿಸಿ ನಿವಾರಿಸಬಹುದು.

ಸಮೀಪ ದೃಷ್ಟಿದೋಷದಲ್ಲಿ ದೂರದ ವಸ್ತುವಿನ ಬಿಂಬವು ರೆಟಿನಾದ ಮುಂಭಾಗದಲ್ಲಿ ಉಂಟಾಗಲು ಕಾರಣ 1.ಕಣ್ಣುಗುಡ್ಡೆಯು ಸಹಜಸ್ಥಿತಿಗಿಂತ ಉದ್ದವಾಗಿರುವುದು2. ಕಣ್ಣಿನ ಮಸೂರದ ವಿಪರೀತ ವಕ್ರತ

ದೂರ ದೃಷ್ಟಿದೋಷಸಮೀಪದ ವಸ್ತುವಿನ ಪ್ರತಿಬಿಂಬವು ಅಸ್ಪಷ್ಟವಾಗಿ ಕಾಣಿಸದೇ ರೆಟಿನಾದ ಹಿಂಭಾಗದಲ್ಲಿ ರೂಪುಗೊಳ್ಳುತ್ತದೆ. ಇದನ್ನು ದೂರದೃಷ್ಟಿದೋಷ ಎನ್ನುವರು. ದೂರದೃಷ್ಟಿಯುಳ್ಳವರಿಗೆ ಸಮೀಪ ಬಿಂದುವು, ಸಾಮಾನ್ಯ ಸಮೀಪ ಬಿಂದುವಾದ 25ಸೆಂ.ಮೀ. ಗಿಂತ ತುಂಬಾ ದೂರದಲ್ಲಿರುತ್ತದೆ. ಇದನ್ನು ಸೂಕ್ತ ಸಾಮರ್ಥ್ಯವುಳ್ಳ ಪೀನಮಸೂರ (ಕೇಂದ್ರೀಕರಿಸುವ ಮಸೂರವುಳ್ಳ (converging)ದಿಂದ ನಿವಾರಿಸಬಹುದು.

ದೂರದೃಷ್ಟಿ ದೋಷದಲ್ಲಿ ಸಮೀಪದ ವಸ್ತುವಿನಿಂದ ಬೆಳಕಿನ ಕಿರಣಗಳು ರೆಟಿನಾದ ಹಿಂಭಾಗದಲ್ಲಿ ಉಂಟಾಗಲು ಕಾರಣ 1 ಕಣ್ಣಿನ ಮಸೂರದ ಸಂಗಮದೂರವು ಉದ್ದವಾಗಿರುವುದು 2. ಕಣ್ಣುಗುಡ್ಡೆಯು ಅತಿ ಚಿಕ್ಕದಾಗಿರುವುದು

ಪ್ರಿಸ್ಟಯೋಪಿಯಾ ಸಾಮಾನ್ಯವಾಗಿ ಕಣ್ಣಿನ ಹೊಂದಾಣಿಕೆಯ ಸಾಮರ್ಥ್ಯ, ವಯಸ್ಸಾದಂತೆ ಕಡಿಮೆಯಾಗುವುದರಿಂದ ಹತ್ತಿರದ ವಸ್ತುಗಳನ್ನು ಆರಾಮದಾಯಕವಾಗಿ ಮತ್ತು ಸ್ಪಷ್ಟವಾಗಿ ಸರಿಪಡಿಸುವ ಕನ್ನಡಕವಿಲ್ಲದೆ ನೋಡಲು ಸಾಧ್ಯವಿಲ್ಲ. ಈ ದೋಷವನ್ನು ಪ್ರಿಸ್ಬಯೋಪಿಯಾ ಎನ್ನುವರು. ಈ ದೋಷವುಂಟಾಗಲು ಕಾರಣ, ಮಸೂರವು ತನ್ನ ಸ್ಥಿತಿಸ್ಥಾಪಕ ಶಕ್ತಿಯನ್ನು ಕಳೆದುಕೊಳ್ಳುವುದು ಅಥವಾ ಕ್ರಮೇಣ ಸಿಲಿಯರಿ ಸ್ನಾಯುಗಳು ದುರ್ಬಲಗೊಳ್ಳುವುದು. ಇದನ್ನು ದ್ವಿಸಂಗಮ ಮಸೂರದಿಂದ ಸರಿಪಡಿಸಬಹದು. (ದ್ವಿಸಂಗಮ ಎಂದರೆ ನಿಮ್ನ ಮತ್ತು ಪೀನ ಮಸೂರವನ್ನು ಹೊಂದಿರುವುದು ) ದ್ವಿಸಂಗಮ (**bifocal**) ಮಸೂರಗಳು ನಿಮ್ನ ಮತ್ತು ಪೀನ ಮಸೂರಗಳೆರಡನ್ನೂ ಹೊಂದಿರುತ್ತವೆ. ಮೇಲ್ಭಾಗದಲ್ಲಿರುವ ನಿಮ್ನ ಮಸೂರವು ದೂರದೃಷ್ಟಿಯನ್ನು, ಹಾಗೂ ಕೆಳಗಿನ ಭಾಗದ ಪೀನ ಮಸೂರವು ಸಮೀಪ ದೃಷ್ಟಿಯನ್ನು ಸುಗಮಗೊಳಿಸುತ್ತದೆ.




ಚಿತ್ರ 11.2
(a), (b), ಸಮೀಪದೃಷ್ಟಿಕಣ್ಣು, ಮತ್ತು (c) ಸಮೀಪದೃಷ್ಟಿಗೆ ನಿಮ್ನ ಮಸೂರದಿಂದ ಪರಿಹಾರ



ಚಿತ್ರ 11.3
(a), (b), ದೂರದೃಷ್ಟಿಕಣ್ಣು, ಮತ್ತು (c) ದೂರದೃಷ್ಟಿಗೆ ಪೀನ ಮಸೂರದಿಂದ ಪರಿಹಾರ
N - ದೂರದೃಷ್ಟಿಕಣ್ಣಿನ ಹತ್ತಿರ ಬಿಂದು
N' - ಸಾಮಾನ್ಯ ಕಣ್ಣಿನ ಹತ್ತಿರ ಬಿಂದು




ಚಿತ್ರ 11.6 ಬಿಳಿಬಣ್ಣದ ರೋಹಿತದ ಪುನರ್ ಸಂಯೋಜನೆ

ಕಣ್ಣಿನ ದೃಷ್ಟಿ ಮುಸುಕಾಗಲು ಕಾರಣ ಕಣ್ಣಿನ ವಕ್ರೀಭವನ ದೋಷದಿಂದ ದೃಷ್ಟಿಯು ಮುಸುಕಾಗುತ್ತದೆ

ಬಣ್ಣಗಳ ಅನುಕ್ರಮ ಜೋಡಣೆ :ನೇರಳೆ, ಊದಾ, ನೀಲಿ, ಹಸಿರು, ಹಳದಿ, ಕಿತ್ತಳೆ ಮತ್ತು ಕೆಂಪು

ಗಗನ ಯಾತ್ರಿಗೆ ಆಕಾಶವು ನೀಲಿಯಾಗಿ ಕಾಣದೆ ಕಪ್ಪಾಗಿ ಕಾಣಲು ಕಾರಣ ಎತ್ತರದಲ್ಲಿ ಬೆಳಕಿನ ಚದುರುವಿಕೆ ಎದ್ದು ಕಾಣುವುದಿಲ್ಲ

ಕಣ್ಣಿನ ಪೊರೆ **(Cataract)** ವಯಸ್ಸಾದವರಿಗೆ ಕಣ್ಣನ ಸ್ಪಟಿಕ ಮಸೂರವು ಹಾಲಿನಂತೆ ಬೆಳ್ಳಗೆ ಹಾಗೂ ಮೋಡ ಕವಿದಂತಾಗುತ್ತದೆ. ಈ ಸ್ಥಿತಿಯನ್ನು ಕಣ್ಣಿನ ಪೊರೆ **(Cataract)**ಎನ್ನುತ್ತೇವೆ. ಇದು ಭಾಗಶಃ ಅಥವಾ ಪೂರ್ಣ ದೃಷ್ಟಿ ನಷ್ಟ ಉಂಟುಮಾಡುತ್ತದೆ

ಗಾಜಿನ ತ್ರಿಭುಜ ಪಾದ ಪಟ್ಟಕ ಇದಕ್ಕೆ ಎರಡು ತ್ರಿಭುಜ ಪಾದಗಳು (**base**) ಹಾಗೂ ಮೂರು ಆಯತಾಕಾರದ ಪಾರ್ಶ್ವ ಮೇಲ್ಮೈಗಳಿರುತ್ತವೆ. ಈ ಮೂರು ಪಾರ್ಶ್ವ(ಮುಖ)ಗಳು ಪರಸ್ಪರ ಓರೆಯಾಗಿವೆ. ಎರಡು ಪಾರ್ಶ್ವಮುಖಗಳ ನಡುವಿನ ಕೋನವನ್ನು ಪಟ್ಟಕದ ಕೋನ ಎನ್ನುತ್ತೇವೆ

ಪಟ್ಟಕದ ಮೂಲಕ ಕೆಂಪು ಬಣ್ಣವು ಕನಿಷ್ಟವಾಗಿ (ನೇರಳೆ ಬಣ್ಣವು ಗರಿಷ್ಟವಾಗಿ ಬಾಗುವುದು

**ಕೆಂಪು ಬಣ್ಣವು ಕಡಿಮೆ ಚದುರುವಿಕೆಯ ಗುಣವನ್ನು ಹೊಂದಿದೆ ಮತ್ತು ಹೆಚ್ಚು ತರಂಗದೂರ ಹೊಂದಿದೆ.**

ರೋಹಿತ ಬೆಳಕಿನ ಕಿರಣದ ವರ್ಣಮಲ ಘಟಕಗಳ ಪಟ್ಟಿಯನ್ನು ರೋಹಿತ ಎನ್ನುತ್ತಾರೆ.

ಬೆಳಕಿನ ವರ್ಣವಿಭಜನೆ ಬಿಳಿಯ ಬಣ್ಣವು ಅದರ ವಿಭಿನ್ನ ಬಣ್ಣಗಳ ಘಟಕಗಳಾಗಿ ವಿಭಜನೆ ಹೊಂದುವುದನ್ನು ಬೆಳಕಿನ ವರ್ಣವಿಭಜನೆ ಎನ್ನುತ್ತೇವೆ.

ಕಾಮನಬಿಲ್ಲು ಯಾವಾಗಲು ಸೂರ್ಯನ ವಿರುದ್ಧ ದಿಕ್ಕಿನಲ್ಲಿ ಉಂಟಾಗುತ್ತದೆ. ಕಾಮನ ಬಿಲ್ಲು ಉಂಟಾಗಲು ಕಾರಣ ನೀರಿನ ಹನಿಗಳು ಕಿರು ಪಟ್ಟಕಗಳಾಗಿ ವರ್ತಿಸುತ್ತವೆ. ಅವು ಸೂರ್ಯನ ಪತನ ಕಿರಣಗಳನ್ನು ವಕ್ರೀಭವನಗೊಳಿಸಿ ಚದುರಿಸುತ್ತವೆ. ನಂತರ ಆಂತರಿಕವಾಗಿ ಪ್ರತಿಫಲಿಸುತ್ತವೆ. ನಂತರ ಅಂತಿಮವಾಗಿ ನೀರಿನ ಹನಿಗಳಿಂದ ಹೊರ ಬರುವಾಗ ವಕ್ರೀಭವನ ಹೊಂದುತ್ತವೆ.

**ಕಾಮನಬಿಲ್ಲು ಉಂಟಾಗಲು ಕಾರಣ** ನೀರಿನ ಹನಿಗಳು ಕಿರುಪಟ್ಟಕಗಳಾಗಿ ವರ್ತಿಸುತ್ತವೆ. ನಂತರ ಸೂರ್ಯನ ಪತನ ಕಿರಣಗಳನ್ನು ವಕ್ರೀಭವನಗೊಳಿಸಿ ಚದುರಿಸುತ್ತವೆ. ಆಂತರಿಕವಾಗಿ ಪ್ರತಿಫಲಿಸಿ ಅಂತಿಮವಾಗಿ ನೀರಿನ ಹನಿಗಳಿಂದ ಹೊರಬರುವಾಗ ವಕ್ರೀಭವನ ಹೊಂದುತ್ತವೆ. ಬೆಳಕಿನ ವರ್ಣವಿಭಜನೆ ಮತ್ತು ಆಂತರಿಕ ಪ್ರತಿಫಲನದಿಂದಾಗಿ ವಿವಿಧ ಬಣ್ಣಗಳಾಗಿ ಕಾಮನಬಿಲ್ಲು ಉಂಟಾಗುತ್ತದೆ.

ಸೂರ್ಯನ ಬೆಳಕು ಏಳು ಬಣ್ಣಗಳಿಂದುಂಟಾಗಿದೆ ಎಂದು ತೀರ್ಮಾನಿಸಲು ನ್ಯೂಟನ್ನರಿಗೆ ಸುಳಿವು ನೀಡಿದ ಪ್ರಯೋಗ ಸರ್ ಐಸ್ಯಾಕ್ ನ್ಯೂಟನ್‌ರವರು ಗಾಜಿನ ಪಟ್ಟಕವನ್ನು ಬಳಸಿ ಸಮರೂಪಿಯಾದ ಮತ್ತೊಂದು ಪಟ್ಟಕವನ್ನು ಮೊದಲಿನ ಪಟ್ಟಕದ ವಿರುದ್ಧ ದಿಕ್ಕಿನಲ್ಲಿ ತಲೆಕೆಳಗಾಗಿ ಇರಿಸಿ ಎಲ್ಲಾ ಬಣ್ಣಗಳು ತಲೆಕೆಳಗಾದ ಪಟ್ಟಕದ ಮೂಲಕ ಹಾದು ಹೋಗಲು ಅವಕಾಶ ಕಲ್ಪಿಸಿದರು. ಎಲ್ಲಾ ಬಣ್ಣಗಳು ತಲೆಕೆಳಗಾದ ಪಟ್ಟಕದ ಮೂಲಕ ಹಾದು ಎರಡನೇ ಪಟ್ಟಕದ ಮತ್ತೊಂದು ಕಡೆಯಿಂದ ನಿರ್ಗಮಿಸುವ ಬೆಳಕು ಬಿಳಿಬಣ್ಣದಾಗಿತ್ತು. ಈ ವೀಕ್ಷಣೆಯು ಸೂರ್ಯನ ಬೆಳಕು ಏಳು ಬಣ್ಣಗಳಿಂದುಂಟಾಗಿದೆ ಎಂದು ಸುಳಿವು ನೀಡಿತು

ಬೆಳಕಿನ ವರ್ಣವಿಭಜನೆ ಮತ್ತು ಆಂತರಿಕ ಪ್ರತಿಫಲನದಿಂದಾಗಿ ವಿವಿಧ ಬಣ್ಣಗಳನ್ನು ನೋಡಬಹುದು.

ವಾಯುಮಂಡಲದಲ್ಲಿನ ವಕ್ರೀಭವನದ ಪರಿಣಾಮಗಳು. ಬಿಸಿಗಾಳಿಯು ಅದರ ಮೇಲಿರುವ ತಣ್ಣನೆಯ ಗಾಳಿಗಿಂತ ಹಗುರ (ಕಡಿಮೆ ಸಾಂದ್ರತೆ) ವಾಗಿರುತ್ತದೆ ಮತ್ತು ತಣ್ಣನೆಯ ಗಾಳಿಗಿಂತ ಸ್ವಲ್ಪ ಕಡಿಮೆ ವಕ್ರೀಭವನ ಸ್ಥಿರಾಂಕ ಹೊಂದಿರುತ್ತದೆ. ಮಾಧ್ಯಮದ ಭೌತಪರಿಸ್ಥಿತಿಗಳು ಸ್ಥಿರವಲ್ಲದ ಕಾರಣ ಬಿಸಿಗಾಳಿಯ ಮೂಲಕ ನೋಡಿದಾಗ. ಈ ವಸ್ತುವಿನ ಸ್ಥಾನದಲ್ಲಿ ತೋರಿಕೆಯ ಬದಲಾವಣೆಗಳಾಗುತ್ತವೆ. ಈ ಬದಲಾವಣೆ ವಾಯುಮಂಡಲದಲ್ಲಿನ ವಕ್ರೀಭವನದ ಪರಿಣಾಮಗಳು.

ದಿಗಂತದಿಂದ ವೀಕ್ಷಿಸಿದಾಗ ನಕ್ಷತ್ರವು ತನ್ನ ನೈಜ ಎತ್ತರಕ್ಕಿಂತ ಸ್ವಲ್ಪ ಎತ್ತರದಲ್ಲಿ ಕಾಣಿಸುತ್ತದೆ. ಏಕೆಂದರೆ . ವಾಯುಮಂಡಲವು ನಕ್ಷತ್ರದ ಬೆಳಕನ್ನು ಲಂಬದ ಕಡೆ ಬಾಗಿಸುವುದರಿಂದ ನಕ್ಷತ್ರದ ತೋರಿಕೆಯ ಸ್ಥಾನವು ಅದರ ನೈಜ ಸ್ಥಾನಕ್ಕಿಂತ ಸ್ವಲ್ಪ ಬೇರೆಯಾಗಿರುತ್ತದೆ. ದಿಗಂತದಿಂದ ವೀಕ್ಷಿಸಿದಾಗ ನಕ್ಷತ್ರವು ತನ್ನ ನೈಜ ಎತ್ತರಕ್ಕಿಂತ ಸ್ವಲ್ಪ ಎತ್ತರದಲ್ಲಿ ಕಾಣಿಸುತ್ತದೆ.

ನಕ್ಷತ್ರಗಳ ಮಿನುಗುವಿಕೆಯ **(twinkling)** ಪರಿಣಾಮನಕ್ಷತ್ರಗಳಿಂದ ಬರುವ ಬೆಳಕಿನ ಕಿರಣಗಳ ಹಾದಿಯು ಸ್ವಲ್ಪ ಮಟ್ಟಿಗೆ ಬದಲಾಗುವುದರಿಂದ ನಕ್ಷತ್ರಗಳ ತೋರಿಕೆಯ ಸ್ಥಾನದಲ್ಲಿ ಸ್ಥಿತ್ಯಂತರವಾಗುತ್ತದೆ. ನಕ್ಷತ್ರಗಳು ಕೆಲವೊಮ್ಮೆ ಪ್ರಕಾಶ ಮಾನವಾಗಿ ಮತ್ತು ಕೆಲವೊಮ್ಮೆ ಕಂದಿದಂತೆ ಕಾಣುತ್ತವೆ. ಇದೇ ನಕ್ಷತ್ರಗಳ ಮಿನುಗುವಿಕೆಯ **(twinkling)** ಪರಿಣಾಮ.

ಗ್ರಹಗಳ ಮಿನುಗುವಿಕೆ ಶೂನ್ಯವಾಗಿದೆ

ವಾಯುಮಂಡಲದಲ್ಲಿನ ವಕ್ರೀಭವನದ ಕಾರಣ ಸೂರ್ಯನು ವಾಸ್ತವ ಸೂರ್ಯೋದಯಕ್ಕಿಂತ ಎರಡು ನಿಮಿಷ ಮೊದಲು ಹಾಗೂ ವಾಸ್ತವ ಸೂರ್ಯಾಸ್ತದ ಎರಡು ನಿಮಿಷ ನಂತರ ನಮಗೆ ಗೋಚರಿಸುತ್ತಾನೆ

ನಿಜವಾದ ಸೂರ್ಯೋದಯವೆಂದರೆ ಸೂರ್ಯನು ದಿಗಂತದ ಸಮತಲವನ್ನು ದಾಟುವ ಸಮಯ

ಸೂರ್ಯ ಮುಂಜಾನೆ ಕೆಂಪಾಗಿರಲು ಬೆಳಕಿನ ಚದುರುವಿಕೆಯಿಂದ ನಮ್ಮ ಕಣ್ಣನ್ನು ತಲುಪುವ ಬೆಳಕು ಹೆಚ್ಚಿನ ತರಂಗ ದೂರವಾಗಿರಲು ಸೂರ್ಯ ಮುಂಜಾನೆ ಕೆಂಪು ಬಣ್ಣದಿಂದ ಕಾಣುತ್ತಾನೆ.

ಶುಭ್ರ ಆಕಾಶದ ಬಣ್ಣದ ನೀಲಿಯಾಗಿರಲು ಕಾರಣ ವಾಯುಮಂಡದಲ್ಲಿನ ಗಾಳಿಯ ಅಣುಗಳು ಮತ್ತು ಸಣ್ಣಕಣಗಳು ಗೋಚರ ಬೆಳಕಿನ ಸಣ್ಣ ತರಂಗಾಂತರವುಳ್ಳ ನೀಲಿ ಅಂಚನ್ನು ಹೆಚ್ಚು ಪರಿಣಾಮ ಕಾರಿಯಾಗಿ ಚದುರಿಸುತ್ತದೆ.

$$R_s = R_1 + R_2 + R_3$$
$$= 5\,\Omega + 15\,\Omega + 20\,\Omega$$
$$= 40\,\Omega$$




ಕೆಳಗಿನ ಮಂಡಲದಲ್ಲಿನ ಒಟ್ಟು ರೋಧ ಕಂಡುಹಿಡಿಯಿರಿ:–




$$1/R_p = 1/R_1 + 1/R_2$$
$$1/R_p = 1/10 + 1/30$$
$$= \frac{3+1}{30}$$
$$= \frac{4}{30}$$
$$R_p = \frac{30}{4}$$
$$R_p = 7.5\,\Omega$$

$$1/R_p = 1/R_1 + 1/R_2 + 1/R_3$$
$$= 1/10 + 2/5 + 1/20$$
$$= \frac{2+4+1}{20}$$
$$= 7/20$$
$$R_p = 20/7$$
$$R_p = 2.85\,\Omega$$




# ಅಧ್ಯಾಯ–13 ವಿದ್ಯುತ್ ಪ್ರವಾಹದ ಕಾಂತೀಯ ಪರಿಣಾಮಗಳು 6 ಅಂಕ

**ವಿದ್ಯುತ್ ಪ್ರವಾಹದ ಕಾಂತೀಯ ಪರಿಣಾಮ :** ವಿದ್ಯುತ್ ಪ್ರವಾಹವಿರುವ ವಾಹಕವು ತನ್ನ ಸುತ್ತ ಕಾಂತಕ್ಷೇತ್ರವನ್ನು ಉಂಟುಮಾಡುವುದು

**ಕಾಂತೀಯ ಬಲ ರೇಖೆಗಳು :** ಕಾಂತಕ್ಷೇತ್ರಗಳನ್ನು ಸೂಚಿಸುವ ಕಾಂತದ ಸುತ್ತಲಿನ ರೇಖೆಗಳು.

**ಸೊಲೆನಾಯ್ಡ್ :** ಅವಾಹಕ ಹೊದಿಕೆ ಇರುವ ತಾಮ್ರದ ತಂತಿಯ ಅನೇಕ ಸುರುಳಿಗಳನ್ನು ಒತ್ತೊತ್ತಾಗಿ ಸುತ್ತಿರುವ ಸಿಲಿಂಡರ್ ಆಕಾರದ ಸಾಧನ

**ವಿದ್ಯುತ್ ಮೋಟಾರ್ :** ವಿದ್ಯುಚ್ಛಕ್ತಿಯನ್ನು ಯಾಂತ್ರಿಕ ಶಕ್ತಿಯನ್ನಾಗಿ ಪರಿವರ್ತಿಸುವ ಸಾಧನ

**ದಿಕ್ಪರಿವರ್ತಕಗಳು :** ಮೋಟಾರ್‌ಗಳಲ್ಲಿ ವಿದ್ಯುತ್ ಪ್ರವಾಹದ ದಿಕ್ಕನ್ನು ಹಿಮ್ಮುಖಗೊಳಿಸುವ ಸಾಧನ

**ವಿದ್ಯುತ್ಕಾಂತೀಯ ಪ್ರೇರಣೆ :** ಒಂದು ಸುರುಳಿಗೆ ಹೊಂದಿಕೊಂಡಿರುವ ಕಾಂತಕ್ಷೇತ್ರ ಬದಲಾದಾಗ ಸುರುಳಿಯಲ್ಲಿ ವಿದ್ಯುತ್ ಪ್ರವಾಹ ಪ್ರೇರಿತವಾಗುವ ವಿದ್ಯಮಾನ.

**ಡೈನಮೋ(ವಿದ್ಯುಜ್ಜನಕ) :** ಯಾಂತ್ರಿಕ ಶಕ್ತಿಯನ್ನು ವಿದ್ಯುಚ್ಛಕ್ತಿಯನ್ನಾಗಿ ಪರಿವರ್ತಿಸುವ ಸಾಧನ

**ಹ್ರಸ್ವ ಮಂಡಲ(ಶಾರ್ಟ್ ಸರ್ಕ್ಯೂಟ್) :** ಕೆಲವೊಮ್ಮೆ ಮಂಡಲದಲ್ಲಿ ಓವರ್ ಲೋಡ್ ಸಂದರ್ಭ ಬಂದಾಗ ವಿದ್ಯುತ್ ಪ್ರವಾಹ ಥಟ್ಟನೆ ಹೆಚ್ಚಾಗಿಬಿಡುವುದು

**ಮ್ಯಾಕ್ಸವೆಲನ ಕಾರ್ಕ ಸ್ಕ್ರೂ ನಿಯಮ(ಬಲಗೈ ಹೆಬ್ಬೆರಳ ನಿಯಮ) :** ಬಲಗೈನಲ್ಲಿ ವಿದ್ಯುತ್ ಪ್ರವಹಿಸುತ್ತಿರುವ ವಾಹಕವನ್ನು ಹಿಡಿದು ಕೊಂಡಿರುವಂತೆ ಭಾವಿಸಿಕೊಂಡರೆ ಹೆಬ್ಬೆರಳು ವಿದ್ಯುತ್ ಪ್ರವಾಹದ ದಿಕ್ಕನ್ನು ಸೂಚಿಸಿದರೆ ಉಳಿದ ಬೆರಳುಗಳು ಕಾಂತಕ್ಷೇತ್ರದ ದಿಕ್ಕಿನಲ್ಲಿ ಮಡಿಚಿಕೊಂಡಿರುತ್ತವೆ.

**ಫ್ಲೆಮಿಂಗನ ಎಡಗೈ ನಿಯಮ (ಮೋಟಾರ್ ನಿಯಮ):** ಎಡಗೈನ ಮೊದಲ ಮೂರು ಬೆರಳುಗಳನ್ನು ಪರಸ್ಪರ ಲಂಬವಾಗಿರುವಂತೆ ಹಿಡಿದುಕೊಂಡಾಗ, ತೋರು ಬೆರಳು ಕಾಂತಕ್ಷೇತ್ರದ ದಿಕ್ಕನ್ನು ಹಾಗು ಮದ್ಯದ ಬೆರಳು ವಿದ್ಯುತ್ ಪ್ರವಾಹದ ದಿಕ್ಕನ್ನು ಸೂಚಿಸಿದರೆ ಆಗ ಹೆಬ್ಬೆರಳು ವಾಹವು ಅನುಭವಿಸುವ ಯಾಂತ್ರಿಕ ಬಲದ ನೇರವನ್ನು ಸೂಚಿಸುತ್ತದೆ.

**ಫ್ಲೆಮಿಂಗನ ಬಲಗೈ ನಿಯಮ(ಡೈನಮೋ ನಿಯಮ)** ಬಲಗೈನ ಮೊದಲ ಮೂರು ಬೆರಳುಗಳನ್ನು ಪರಸ್ಪರ ಲಂಬವಾಗಿರುವಂತೆ ಹೊಂದಿಸಿದಾಗ, ತೋರುಬೆರಳು ಕಾಂತಕ್ಷೇತ್ರದ ದಿಕ್ಕನ್ನು ಹಾಗೂ ಹೆಬ್ಬೆರಳು ವಾಹಕದ ದಿಕ್ಕನ್ನು ಸೂಚಿಸಿದರೆ ಆಗ ಮಧ್ಯದ ಬೆರಳು ಪ್ರೇರಿತ ವಿದ್ಯುತ್ ಪ್ರವಾಹದ ದಿಕ್ಕನ್ನು ಸೂಚಿಸುತ್ತದೆ.




ಚಿತ್ರ : 13.19:
ವಿದ್ಯುತ್ ಜನಕದ ತತ್ವದ ವಿವರಣೆ




ಚಿತ್ರ : 13.15:
ಒಂದು ಸರಳ ವಿದ್ಯುತ್ ಮೋಟಾರ್.




ಚಿತ್ರ : 13.7
ಬಲಗೈ ಹೆಬ್ಬೆರಳ ನಿಯಮ

**ಕಾಂತಕ್ಷೇತ್ರದ ಬಲದ ಭೌತಪರಿಮಾಣದ ಏಕಮಾನ :** ಆರ್ಸ್ಟೆಡ್

**ಪರ್ಯಾಯ ವಿದ್ಯುತ್ ಪ್ರವಾಹದ ಆವೃತ್ತಿ ಭಾರತದಲ್ಲಿ :** 50Hz

**ಭಾರತ ದೇಶದಲ್ಲಿ ಸಜೀವ ತಂತಿ ಮತ್ತು ತಟಸ್ಥ ತಂತಿಗಳ ನಡುವಿನ ವಿಭವಾಂತರ :** 220V

**ದಂಡಕಾಂತದ ಸಮೀಪ ತಂದ ದಿಕ್ಸೂಚಿಯು ಪಲ್ಲಟಗೊಳ್ಳುತ್ತದೆ : ಕಾರಣ** ದಿಕ್ಸೂಚಿಯು ಸಣ್ಣ ದಂಡಕಾಂತವಾಗಿದ್ದು ಕಾಂತದ ಸಜಾತೀಯ ದ್ರುವಗಳು ವಿಕರ್ಷಿಸುತ್ತವೆ ಹಾಗೂ ವಿಜಾತೀಯ ದ್ರುವಗಳು ಆಕರ್ಷಿಸುತ್ತವೆ.

**ಸುರುಳಿಯ ಒಳಗೆ ಕಾಂತ ಸ್ಥಿರವಾಗಿದ್ದಾಗ ವಿದ್ಯುತ್ ಪ್ರವಾಹವನ್ನು ಉತ್ಪಾದಿಸುವುದಿಲ್ಲ : ಕಾರಣ**

ಸುರುಳಿ ಮತ್ತು ಕಾಂತದ ನಡುವೆ ಸಾಪೇಕ್ಷ ಚಲನೆ ಇಲ್ಲದಿರುವುದಿಂದ ಮಂಡಲಕ್ಕೆ ಹೊಂದಿಕೊಂಡ ಕಾಂತ ಕ್ಷೇತ್ರವು ಬದಲಾಗುವುದಿಲ್ಲ.

**ಎರಡು ಕಾಂತೀಯ ಬಲರೇಖೆಗಳು ಒಂದನ್ನೊಂದು ಛೇದಿಸುವುದಿಲ್ಲ ಕಾರಣ** ಎರಡು ಕಾಂತೀಯ ಬಲರೇಖೆಗಳು ಒಂದನ್ನೊಂದು ಛೇದಿಸಿದರೆ ಕಾಂತಸೂಜಿಯು ಎರಡೂ ದಿಕ್ಕುಗಳನ್ನು ನಿರ್ದೇಶಿಸಬೇಕು. ಆದರೆ ಇದು ಸಂಭವನೀಯವಲ್ಲ.

**ವಿದ್ಯುತ್ ಪ್ರವಹಿಸಿದಾಗ ಸೊಲೆನಾಯ್ಡ್‌ನ ಕೇಂದ್ರದಲ್ಲಿ ಪ್ರತಿ ಬಿಂದುವಿನಲ್ಲಿಯೂ ಏಕರೂಪದ ಕಾಂತಕ್ಷೇತ್ರವನ್ನುಹೊಂದಿರುತ್ತದೆ : ಕಾರಣ** ಸೊಲೆನಾಯ್ಡ್‌ನಲ್ಲಿ ಹಲವಾರು ಸುರುಳಿಗಳಿದ್ದು ಸುರುಳಿಯ ಕೇಂದ್ರಭಾಗದಲ್ಲಿ ಕಾಂತೀಯ ಬಲರೇಖೆಗಳು ಸಮಾಂತರ ರೇಖೆಗಳಂತೆ ಇರುತ್ತವೆ.

**ಕಾಂತಕ್ಷೇತ್ರದಲ್ಲಿ ವಿದ್ಯುತ್ ಪ್ರವಹಿಸುತ್ತಿರುವ ವಾಹಕವನ್ನಿರಿಸಿದರೆ ಚಲಿಸುತ್ತದೆ : ಕಾರಣ** ಏಕೆಂದರೆ ಅದು ಯಾಂತ್ರಿಕ ಬಲವನ್ನು ಅನುಭವಿಸುತ್ತದೆ.

**ಡಿ.ಸಿ ಡೈನಮೋ ರಚನೆಯಲ್ಲಿ ಜಾರುಉಂಗುರಗಳ ಬದಲಾಗಿ ಸೀಳು ಉಂಗುರಗಳನ್ನು ಬಳಸಿದೆ :** ಸೀಳು ಉಂಗುರಗಳ ಸ್ಥಾನಗಳು ಬದಲಾವಣೆಯಾದರೂ ಹೊರಮಂಡಲದಲ್ಲಿ ವಿದ್ಯುತ್ ಪ್ರವಾಹದ ದಿಕ್ಕು ಬದಲಾಗುವುದಿಲ್ಲ. ಇದು ಜಾರು ಉಂಗುರಂಗಳಿಂದ ಸಾಧ್ಯವಿಲ್ಲ.

**ಎರಡು ವೃತ್ತಾಕಾರದ ಸುರಳಿ A ಮತ್ತು B ಗಳನ್ನು ಪರಸ್ಪರ ಹತ್ತಿರ ಇಟ್ಟಾಗ ಸುರುಳಿ A ನಲ್ಲಿ ವಿದ್ಯುತ್ ಪ್ರವಾಹ ಬದಲಾದರೆ ಸುರುಳಿB ನಲ್ಲಿ ವಿದ್ಯುತ್ ಪ್ರೇರಣೆಯಾಗುತ್ತದೆ :** ಏಕೆಂದರೆ A ನಲ್ಲಿ (ಪ್ರೈಮರಿ ಸುರುಳಿ) ಬದಲಾದ ವಿದ್ಯುತ್ ಪ್ರವಾಹದಿಂದ ಬದಲಾದ ಕಾಂತಕ್ಷೇತ್ರ ಉಂಟಾಗುತ್ತದೆ.ಈ ಕಾಂತಕ್ಷೇತ್ರ B ನಲ್ಲಿ (ಸೆಕೆಂಡರಿ ಸುರುಳಿ)ವಿದ್ಯುತ್ ಪ್ರೇರಣೆ ಮಾಡುತ್ತದೆ.

**ಡೈನಮೋ ಕಾರ್ಯ ನಿರ್ವಹಿಸುವ ತತ್ವ :** ವಿದ್ಯುತ್ ಕಾಂತೀಯ ಪ್ರೇರಣೆ .

**ಮೋಟಾರ್ ಕಾರ್ಯ ನಿರ್ವಹಿಸುವ ತತ್ವ :** ಕಾಂತಕ್ಷೇತ್ರದಲ್ಲಿ ವಿದ್ಯುತ್ ಪ್ರವಹಿಸುತ್ತಿರುವ ವಾಹಕವನ್ನಿರಿಸಿದರೆ' ಅದು ಯಾಂತ್ರಿಕ ಬಲವನ್ನು ಗಳಿಸುತ್ತದೆ

**ಸೊಲೆನಾಯ್ಡ್: ಉಪಯೋಗಗಳು/ಅನುಕೂಲಗಳು/ ಅನ್ವಯಗಳು** ವಿದ್ಯುತ್ ಪ್ರವಹಿಸಿದಾಗ ಸೊಲೆನಾಯ್ಡ್‌ನ ಕೇಂದ್ರದಲ್ಲಿ ಪ್ರತಿ ಬಿಂದುವಿನಲ್ಲಿಯೂ ಏಕರೂಪದ ಕಾಂತಕ್ಷೇತ್ರವನ್ನು ಹೊಂದಿರುವುದರಿಂದ ಈ ಪ್ರದೇಶದಲ್ಲಿ ಮೆದು ಕಬ್ಬಿಣವನ್ನು ಇರಿಸಿ ಅದನ್ನು ಕಾಂತೀಯಗೊಳೀಸಲು ಬಳಸಬಹುದು.

| ಎ.ಸಿ.ಡೈನಮೋ | ಡಿ.ಸಿ.ಡೈನಮೋ |
|---|---|
| * ಪರ್ಯಾಯ ವಿದ್ಯುತ್ ಉತ್ಪತ್ತಿ ಮಾಡುತ್ತದೆ<br>* ತಾಮ್ರದ ಪೂರ್ಣ ಉಂಗುರಗಳಿರುತ್ತವೆ<br>* ವಿದ್ಯುತ್ ಪ್ರವಾಹ ಪ್ರತಿ ಅರ್ಧ ಸುತ್ತಿಗೊಮ್ಮೆ ವಿದ್ಯುತ್ ಪ್ರಸರಣದ ದಿಕ್ಕು ಬದಲಿಸುತ್ತದೆ. | * ನೇರ ವಿದ್ಯುತ್ ಉತ್ಪತ್ತಿ ಮಾಡುತ್ತದೆ<br>* ತಾಮ್ರದ ಒಡಕು ಉಂಗುರಗಳಿರುತ್ತವೆ<br>* ವಿದ್ಯುತ್ ಪ್ರವಾಹ ದಿಕ್ಕು ಬದಲಿಸುವುದಿಲ್ಲ |
| **ಡೈನಮೋ** | **ಮೋಟಾರ್** |
| * ಯಾಂತ್ರಿಕ ಶಕ್ತಿಯಿಂದ ವಿದ್ಯುತ್ ಶಕ್ತಿಗೆ ಪರಿವರ್ತನೆ<br>* ಫ್ಲೆಮಿಂಗ್‌ನ ಬಲಗೈ ನಿಯಮದ ಆಧಾರ ಕಾರ್ಯನಿರ್ವಹಣೆ | * ವಿದ್ಯತ್‌ಶಕ್ತಿಯಿಂದ ಯಾಂತ್ರಿಕ ಶಕ್ತಿಗೆ ಪರಿವರ್ತನೆ<br>* ಫ್ಲೆಮಿಂಗ್‌ನ ಎಡಗೈ ನಿಯಮದ ಆಧಾರ ಕಾರ್ಯನಿರ್ವಹಣೆ |
| **ನೇರ ವಿದ್ಯುತ್(ಡಿ.ಸಿ)** | **ಪರ್ಯಾಯ ವಿದ್ಯುತ್(ಎ.ಸಿ)** |
| ಒಂದೇ ದಿಕ್ಕಿನಲ್ಲಿ ಹರಿಯುತ್ತದೆ. | ನಿಯತಕಾಲಿಕವಾಗಿ ತನ್ನ ದಿಕ್ಕನ್ನು ಹಿಮ್ಮುಖಗೊಳಿಸುತ್ತದೆ |

**ವಿದ್ಯುತ್ ಮಂಡಲದಲ್ಲಿ ಬಳಸುವ ಭೂ ಸಂಪರ್ಕ ತಂತಿ : ಉಪಯೋಗಗಳು/ಅನುಕೂಲಗಳು/ ಅನ್ವಯಗಳು** ಕಡಿಮೆ ರೋಧವುಳ್ಳ ವಿದ್ಯುತ್ ಪ್ರವಾಹವನ್ನು ಉಂಟುಮಾಡಿ ವಿದ್ಯುತ್ ಉಪಕರಣಗಳಿಗೆ ವಿದ್ಯುತ್ ಸೋರಿಕೆಯಾದಾಗ ಯಾವುದೇ ಹಾನಿಯಾಗದಂತೆ ತಡೆಯುತ್ತದೆ. ವಿದ್ಯುತ್ ಸೋರಿಕೆಯಾದಾಗ ಅದರ ವಿಭವಾಂತರವನ್ನು ಭುಮಿಯ ವಿಭವಾಂತರಕ್ಕೆ ಸಮನಾಗಿರುವಂತೆ ಮಾಡುವುದರಿಂದ ಬಳಕೆದಾರರಿಗೆ ಆಘಾತ ಉಂಟಾಗುವುದಿಲ್ಲ

**ಮ್ಯಾಕ್ಸವೆಲನ ಕಾರ್ಕ ಸ್ಕ್ರೂ ನಿಯಮ ಉಪಯೋಗಗಳು/ಅನುಕೂಲಗಳು/ ಅನ್ವಯಗಳು :** ವಿದ್ಯುತ್ಪ್ರವಹಿಸುತ್ತಿರುವ ಒಂದು ನೇರ ವಾಹಕದ ಸುತ್ತಲೂ ಇರುವ ಕಾಂತಕ್ಷೇತ್ರದ ದಿಕ್ಕು ತಿಳಿಯಲು

**ಫ್ಲೆಮಿಂಗನ ಎಡಗೈ ನಿಯಮ ಉಪಯೋಗಗಳು/ಅನುಕೂಲಗಳು/ ಅನ್ವಯಗಳು:** ವಿದ್ಯುತ್ಪ್ರವಹಿಸುತ್ತಿರುವ ಒಂದು ನೇರ ವಾಹಕವನ್ನು ಲಂಬವಾಗಿ ಕಾಂತಕ್ಷೇತ್ರದಲ್ಲಿರಿಸಿದಾಗ ಅದು ಅನುಭವಿಸುವ ಯಾಂತ್ರಿಕ ಬಲದ ನೇರ ತಿಳಿಯಲು.

**ಫ್ಲೆಮಿಂಗನ ಬಲಗೈ ನಿಯಮ ಉಪಯೋಗಗಳು/ಅನುಕೂಲಗಳು/ ಅನ್ವಯಗಳು:** ಕಾಂತಕ್ಷೇತ್ರದಲ್ಲಿ ಸುರುಳಿಯ ತಿರುಗುವಿಕೆಯಿಂದ ಉಂಟಾದ ವಿದ್ಯುತ್ ಪ್ರವಾಹದ ದಿಕ್ಕು ತಿಳಿಯಲು.

**15 A ವಿದ್ಯುತ್ ಪ್ರವಾಹ ಬಳಸುವ ಮಂಡಲ ಉಪಯೋಗಗಳು/ಅನುಕೂಲಗಳು/ ಅನ್ವಯಗಳು** ಗೀಸರ್, ಕೂಲರ್,ತಂಪುಕಾರಕಗಳು ಮತ್ತು ವಾಷಿಂಗ್ ಮೆಷಿನ್ ಬಳಕೆಗೆ

**5 A ವಿದ್ಯುತ್ ಪ್ರವಾಹ ಬಳಸುವ ಮಂಡಲ ಉಪಯೋಗಗಳು/ಅನುಕೂಲಗಳು/ ಅನ್ವಯಗಳು** ಬಲ್ಬ್, ಮಿಕ್ಸಿ, ಫ್ಯಾನ್ ಮತ್ತು ಟಿ.ವಿ ಮುಂತಾದವುಗಳ ಬಳಕೆಗೆ

**ಫ್ಯೂಸ್ : ಉಪಯೋಗಗಳು/ಅನುಕೂಲಗಳು/ ಅನ್ವಯಗಳು** ಹ್ರಸ್ವ ಮಂಡಲ(ಶಾರ್ಟ್ ಸರ್ಕ್ಯೂಟ್) ತಪ್ಪಿಸಲು. ಫ್ಯೂಸ್ ತಂತಿ ಕರಗಿ ಸಂಪರ್ಕ ಕಡಿತಗೊಳಿಸುತ್ತದೆ.

**ಪರ್ಯಾಯ (ಎ.ಸಿ) ವಿದ್ಯುತ್ ಪ್ರವಾಹದ :** ವಿದ್ಯುತ್ ಶಕ್ತಿಯನ್ನು ದೂರದ ಸ್ಥಳಗಳಿಗೆ ಅದರಲ್ಲಿರುವ ಹೆಚ್ಚಿನ ಶಕ್ತಿಯು ನಷ್ಟವಾಗದಂತೆ ಕಳುಹಿಸಬಹುದು

**ಕಾಂತೀಯ ಬಲರೇಖೆಗಳ ಗುಣಗಳು :** 1) ಆವೃತ ಜಾಲಗಳು 2) ಕಾಂತಕ್ಷೇತ್ರ ಹೆಚ್ಚಾಗಿರುವ ಕಡೆ ಕಾಂತೀಯ ಬಲರೇಖೆಗಳು ದಟ್ಟವಾಗಿರುತ್ತವೆ ಮತ್ತು ಕಡಿಮೆ ಇರುವಕಡೆ ವಿರಳವಗಿರುತ್ತವೆ. 3) ಅವು ಒಂದನ್ನೊಂದು ಛೇದಿಸುವುದಿಲ್ಲ

**ಒಂದು ನೇರ ವಾಹಕದ ಮೂಲಕ ವಿದ್ಯುತ್ ಹರಿಸಿದಾಗ ಉಂಟಾಗುವ ಕಾಂತಕ್ಷೇತ್ರವು ಅವಲಂಬಿಸಿರುವ ಅಂಶಗಳು :**(ಕಾಂತೀಯ ಬಲರೇಖೆಗಳು ಏಕಕೇಂದ್ರೀಯವಾಗಿರುತ್ತವೆ) 1. ಕಾಂತಕ್ಷೇತ್ರದ ದಿಕ್ಕು, ವಿದ್ಯುತ್ ಹರಿಯುವ ದಿಕ್ಕನ್ನು ಅವಲಂಬಿಸಿದೆ 2. ಕಾಂತಕ್ಷೇತ್ರದ ಪ್ರಮಾಣ ವಾಹಕದ ಮೂಲಕ ಹರಿಯುವ ವಿದ್ಯುತ್ ಪ್ರಮಾನವನ್ನು ಅವಲಂಬಿಸಿದೆ 3. ವಾಹಕದಿಂದ ದೂರ ಸರಿದಂತೆ ಕಾಂತಕ್ಷೇತ್ರದ ತೀವ್ರತೆ ಕಡಿಮೆಯಾಗುತ್ತದೆ.( ಕಾಂತಕ್ಷೇತ್ರ ವಾಹಕದ ದೂರದೊಂದಿಗೆ ವಿಲೋಮ ಅನಪಾತದಲ್ಲಿರುತ್ತದೆ.

**ವೃತ್ತಾಕಾರದ ವಾಹಕದ ಮೂಲಕ ವಿದ್ಯುತ್ ಹರಿಸಿದಾಗ ಉಂಟಾಗುವ ಕಾಂತಕ್ಷೇತ್ರವು ಅವಲಂಬಿಸಿರುವ ಅಂಶಗಳು : 1) ಸುತ್ತುಗಳ ಸಂಖ್ಯೆ :** ಕಾಂತಕ್ಷೇತ್ರವು ಸುರುಳಿಯಲ್ಲಿನ ಸುತ್ತುಗಳನ್ನು ಹೆಚ್ಚಿಸುವುದರೊಂದಿಗೆ ಹೆಚ್ಚಾಗುತ್ತದೆ **2) ವಿದ್ಯುತ್‌ನ ಪ್ರಮಾಣ :** ಕಾಂತಕ್ಷೇತ್ರದ ಪ್ರಮಾಣವು ವಿದು ್ಯತ್‌ನ ಹೆಚ್ಚಳದೊಂದಿಗೆ ಹೆಚ್ಚಾಗುತ್ತದೆ **3) ವಾಹಕದ ತ್ರಿಜ್ಯ :** ವಾಹಕದ ತ್ರಿಜ್ಯ ಕಡಿಮೆಯಾದಂತೆ ಕಾಂತಕ್ಷೇತ್ರದ ಪ್ರಮಾಣವು ಹೆಚ್ಚಾಗುತ್ತದೆ

**ಪ್ರೇರಿತ ವಿದ್ಯುಚ್ಚಾಲಕ ಬಲವು ಅವಲಂಬಿಸಿರುವ ಅಂಶಗಳು ಯಾವುವು?**

- ತಂತಿ ಸುರುಳಿಯ ಸುತ್ತುಗಳ ಸಂಖ್ಯೆ.
- ಕಾಂತ ಕ್ಷೇತ್ರದ ಬಲ
- ಕಾಂತ ಅಥವಾ ತಂತಿ ಸುರುಳಿಯ ಚಲನೆಯ ದರ
- ಸುರುಳಿಯ ವಿಸ್ತೀರ್ಣ

**ವಿದ್ಯುತ್ಪ್ರವಹಿಸುತ್ತಿರುವ ಒಂದು ನೇರ ವಾಹಕವನ್ನು ಕಾಂತಕ್ಷೇತ್ರದಲ್ಲಿರಿಸಿದಾಗ ಅದು ಅನುಭವಿಸುವ ಬಲದ ನೇರ** ವಿದ್ಯುತ್ ಪ್ರವಾಹದ ನೇರಕ್ಕೆ ಲಂಬವಾಗಿರುತ್ತದೆ ಮತ್ತು ಕಾಂತಕ್ಷೇತ್ರದ ನೇರಕ್ಕೆ ಲಂಬವಾಗಿರುತ್ತದೆ.

**ವಿದ್ಯುತ್ಪ್ರವಹಿಸುತ್ತಿರುವ ಒಂದು ನೇರ ವಾಹಕವನ್ನು ಕಾಂತಕ್ಷೇತ್ರದಲ್ಲಿರಿಸಿದಾಗ ಅದು ಅನುಭವಿಸುವ ಬಲದ ನೇರವನ್ನು** ವಿದ್ಯುತ್ ಪ್ರವಾಹದ ನೇರವನ್ನು(ದಿಕ್ಕನ್ನು) ಬದಲಿಸುವುದರಿಂದ ವ್ಯತಿರಿಕ್ತ ಗೊಳಿಸಬಹುದು ( ಬದಲಿಸಬಹುದು)

**ಗ್ಯಾಲ್ವಾನೊಮೀಟರ್ಗೆ ಸಂಪರ್ಕಿಸಿರುವ ಹೆಚ್ಚಿನ ಸಂಖ್ಯೆಯ ಸುತ್ತುಗಳುಳ್ಳ ವಾಹಕ ಸುರುಳಿಯಲ್ಲಿ**
**1) ದಂಡಕಾಂತವನ್ನು ಉತ್ತರ ಧ್ರುವದ ಕಡೆಯಿಂದ ತೂರಿಸಿದಾಗ** ವಿದ್ಯುತ್ ಪ್ರೇರಿತವಾಗಿ ಗ್ಯಾಲ್ವಾನೊಮೀಟರಿನಲ್ಲಿ ವಿಚಲನೆ ಉಂಟಾಗುತ್ತದೆ. **2) ತೂರಿಸಿದ ದಂಡಕಾಂತವನ್ನು ಹಿಂದಕ್ಕೆ ಸರಿಸಿದಾಗ** ಗ್ಯಾಲ್ವಾನೊಮೀಟರಿನ ಸೂಜಿಯು ಎಡಕ್ಕೆ ವಿಚಲನೆ ಗೊಳ್ಳುತ್ತದೆ. ಏಕೆಂದರೆ ವಿದ್ಯುತ್ ಪ್ರವಾಹದ ದಿಕ್ಕು ಮೊದಲು ಪ್ರೇರಿತವಾದ ವಿದ್ಯುತ್ ಪ್ರವಾಹದ ದಿಕ್ಕಿಗೆ ವಿರುದ್ಧ ವಾಗಿರುತ್ತದೆ. **3) ಸುರುಳಿಯ ಒಳಗೆ ಕಾಂತ ಸ್ಥಿರವಾಗಿದ್ದಾಗ** ಸುರುಳಿ ಮತ್ತು ಕಾಂತದ ನಡುವೆ ಸಾಪೇಕ್ಷ ಚಲನೆ ಇಲ್ಲದಿರುವುದಿಂದ ವಿದ್ಯುತ್ ಪ್ರೇರಿತವಾಗುವುದಿಲ್ಲ.

**ಗೃಹಬಳಕೆಯ ವಿದ್ಯುತ್ ಮಂಡಲಗಳಲ್ಲಿ ಉಂಟಾಗುವ ಓವರ್ ಲೋಡ್‌ನ್ನು ತಪ್ಪಿಸಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು :**

ಎ) ಸಜೀವ ತಂತಿ ಮತ್ತು ತಟಸ್ಥ ತಂತಿಗಳು ಎರಡೂ ನೇರ ಸಂಪರ್ಕಕ್ಕೆ ಬರದಂತೆ ಎಚರ್ರಿಕೆ ವಹಿಸಬೇಕು .ಬಿ) ಸರಬರಾಜಾಗುವ ವೋಲ್ಟೇಜ್ ಆಕಸ್ಮಿಕ ಹೆಚ್ಚಳವಾಗದಂತೆ ನೋಡಿಕೊಳ್ಳಬೇಕು. ಸಿ) ಹಲವು ವಿದ್ಯುತ್ ಉಪಕರಣಗಳನ್ನು ಒಂದೇ ಸಾಕೆಟ್‌ಗೆ ಜೋಡಿಸಬಾರದು.

5 A ವಿದ್ಯುತ್ ರೇಟಿಂಗ್ ಹಾಗೂ 2 KW ವಿದ್ಯುತ್ ಸಾಮರ್ಥ್ಯ ಹೊಂದಿರುವ ಒಂದು ಸೂಕ್ಷ್ಮ ತರಂಗ ಒಲೆಯನ್ನು ಗೃಹ ಬಳಕೆಯ ವಿದ್ಯುತ್ ಮಂಡಲದಲ್ಲಿ 220V ಬಳಸಿದೆ. ಇಲ್ಲಿ ಯಾವ ಪರಿಣಾಮವನ್ನು ನಿರೀಕ್ಷಿಸಬಹುದು. ಇಲ್ಲಿ P =2KW V=220 V P = V X I

$$I = \frac{P}{V} \qquad I = \frac{1000X2}{220} = 9.09\ A$$

**ವಿದ್ಯುತ್ ಮೋಟರ್ ರಚನೆ** ಎ) ಕಾಂತದ ಎರಡು ಧ್ರುವಗಳ ನಡುವೆ ABCD ಸುರುಳಿಯನ್ನು ಇರಿಸಲಾಗಿದೆ ಸುರುಳಿಯ AB ಮತ್ತು CD ಬದಿಗಳು ಕಾಂತಕ್ಷೇತ್ರದ ದಿಕ್ಕಿಗೆ ಲಂಬವಾಗಿರುತ್ತವೆ. ಬಿ) ಸುರುಳಿಯ ತುದುಗಳನ್ನು ಎರಡು ಒಡಕು ಉಂಗುರಗಳಾದ X ಮತ್ತು Y ಗಳಿಗೆ

ಜೋಡಿಸಲಾಗಿದೆ. ಸಿ) ಒಡಕು ಉಂಗುರಗಳ ಆಂತರಿಕ ಬದಿಗಳನ್ನು ಇನ್ಸುಲೇಟ್ ಮಾಡಿ ದಂಡಕ್ಕೆ ಲಗತ್ತಿಸಲಾಗಿದೆ. ಡಿ) ಒಡಕು ಉಂಗುರಗಳ ಬಾಹ್ಯ ವಾಹಕ ತುದಿಗಳನ್ನು ಅನುಕ್ರಮವಾಗಿ ಸ್ಥಿರ ವಾಹಕ ಕುಂಚ P ಮತ್ತು Q ಗಳನ್ನು ಸ್ಪರ್ಶಿಸಿವೆ.

**ವಿದ್ಯುತ್ ಮೋಟರ್ ಕಾರ್ಯ :** 1) ABCD ಸುರುಳಿಯಲ್ಲಿ P ಮತ್ತು X ಮೂಲಕ ವಿದ್ಯುತ್ ಪ್ರವಾಹ ಹರಿದಾಗ ಯಾಂತ್ರಿಕ ಬಲವು ಸುರುಳಿಯ ಬಾಹುಗಳ ಮೇಲೆ ವಿರುದ್ಧ ದಿಕ್ಕಿನಲ್ಲಿ ಪ್ರಯೋಗವಗುತ್ತದೆ. 2) AB ಯ ಮೇಲೆ ಉಂಟಾಗುವ ಬಲವು ಅದನ್ನು ಕೆಳಕ್ಕೆ ತಳ್ಳುತ್ತದೆ. ಆದರೆ CD ಯ ಮೇಲೆ ಉಂಟಾಗುವ ಬಲ ಅದನ್ನು ಮೇಲಕ್ಕೆ ತಳ್ಳುತ್ತದೆ. ಆದ್ದರಿಂದ ಸುರುಳಿಯು ತನ್ನ ಅಕ್ಷದ ಮೇಲೆ ಅಪ್ರದಕ್ಷಣವಾಗಿ ಸುತ್ತುತ್ತದೆ. 3) ಸುರುಳಿಯು ಮೊದಲ ಅರ್ಧ ಸುತ್ತು ಸುತ್ತಿದಾಗ ಒಡಕು ಉಂಗರ X ಕುಂಚ Q ನೊಂದಿಗೆ ಸಂಪರ್ಕ ಹೊಂದುತ್ತದೆ ಹಾಗೂ ಒಡಕು ಉಂಗರ Y ಕುಂಚ P ನೊಂದಿಗೆ ಸಂಪರ್ಕ ಹೊಂದುತ್ತದೆ. 4) ಈಗ ವಿದ್ಯುತ್ ಪ್ರವಾಹ DCBA ಮಾರ್ಗದಲ್ಲಿ ಚಲಿಸುತ್ತದೆ. ಆಗ AB ಯ ಮೇಲೆ ಉಂಟಾಗುವ ಬಲವು ಅದನ್ನು ಮೇಲಕ್ಕೆ ತಳ್ಳುತ್ತದೆ. ಆದರೆ CD ಯ ಮೇಲೆ ಉಂಟಾಗುವ ಬಲ ಅದನ್ನು ಕೆಳಕ್ಕೆ ತಳ್ಳುತ್ತದೆ ಅದ್ದರಿಂದ ಸುರುಳಿ ಒಂದೇ ದಿಕ್ಕಿನಲ್ಲಿ ಚಲಿಸುತ್ತದೆ.

**ಪರ್ಯಾಯ ವಿದ್ಯುತ್ ಜನಕದ ರಚನೆ** 1) ಕಾಂತದ ಎರಡು ಧ್ರುವಗಳ ನಡುವೆ ABCD ಸುರುಳಿಯನ್ನು ಇರಿಸಲಾಗಿದೆ 2) ಸುರುಳಿಯ ತುದಿಗಳನ್ನು ಉಂಗುರಗಳಾದ R1 ಮತ್ತು R2 ಗಳಿಗೆ ಜೋಡಿಸಿದೆ 3) B1 ಮತ್ತು B2 ಕುಂಚಗಳನ್ನು ಪ್ರತ್ಯೇಕವಾಗಿ R1 ಮತ್ತು R2 ಗಳಿಗೆ ಒತ್ತಿಕೊಂಡಿರುವಂತೆ ಜೋಡಿಸಿದೆ 4) B1 ಮತ್ತು B2 ಕುಂಚಗಳ ಹೊರ ತುದಿಗಳನ್ನು ಗ್ಯಾಲ್ವಾನೊಮೀಟರಿಗೆ ಸಂಪರ್ಕಿಸಿದೆ.

**ಪರ್ಯಾಯ ವಿದ್ಯುತ್ ಜನಕದ ಕಾರ್ಯ** 1. ಆರ್ಮೇಚರನ್ನು ಪ್ರದಕ್ಷಿಣವಾಗಿ ಅರ್ಧ ಸುತ್ತು ತಿರುಗಿಸಿದಾಗ ಕಾಂತಕ್ಷೇತ್ರ ಬದಲಾದಾಗ ABCD ಸುರುಳಿಯಲ್ಲಿ ವಿದ್ಯುತ್ ಪ್ರವಾಹ ಉಂಟಾಗುತ್ತದೆ. 2. D ಯು R1 ಗೆ ಸಂಪರ್ಕ ಹೊಂದುತ್ತದೆ. R1 ಉಂಗುರ B1ಗೆ ಸಂಪರ್ಕ ಹೊಂದುತ್ತದೆ. ವಿದ್ಯುತ್ ಪ್ರವಾಹ B1 ನಿಂದ B2 ಕಡೆಗೆ ಹರಿಯುತ್ತದೆ. 3. ಎರಡನೇ ಅರ್ಧ ಸುತ್ತಿನಲ್ಲಿ ವಿದ್ಯುತ್ ಪ್ರವಾಹ DCBA ಮಾರ್ಗವಾಗಿ B2 ನಿಂದ B1 ಕಡೆಗೆ ಹರಿಯುತ್ತದೆ. 4. ಈ ರೀತಿ ವಿದ್ಯುತ್ ಪ್ರವಾಹ ಬಾಹ್ಯ ಮಂಡಲದಲ್ಲಿ ಪ್ರತಿ ಅರ್ಧ ಸುತ್ತಿಗೊಮ್ಮೆ ತನ್ನ ದಿಕ್ಕನ್ನು ಬದಲಿಸುತ್ತದೆ.

# ಅಧ್ಯಾಯ–14 ಶಕ್ತಿಯ ಪರ್ಯಾಯ ಆಕರ 3 ಅಂಕ

**ಅಸಾಂಪ್ರದಾಯಿಕ ಶಕ್ತಿಯ ಆಕರಗಳು:** ಸದ್ಯ ಬಳಕೆಯಲ್ಲಿರುವ ಶಕ್ತಿಯ ಆಕರಗಳಿಗೆ ಪರ್ಯಾಯ ವಾಗಿರುವುದು. ಉದಾ : ಸೌರಶಕ್ತಿ , ಮಾರುತ ಶಕ್ತಿ, ಸಾಗರ ಅಲೆಗಳ ಶಕ್ತಿ, ಭೂಗರ್ಭ ಉಷ್ಣ ಶಕ್ತಿ

**ಪಳಯುಳಿಕೆ ಇಂದನಗಳು(ಪಾಸಿಲ್ ಇಂದನಗಳು) :** ಪೆಟ್ರೋಲ್, ಡಿಸಲ್, ಕಲ್ಲಿದ್ದಿಲು ಮತ್ತು ನೈಸರ್ಗಿಕ ಅನಿಲ, ಸೀಮೆಎಣ್ಣೆ, ಎಲ್.ಪಿ.ಜಿ ಇತ್ಯಾದಿ.

**ಉಷ್ಣ ವಿದ್ಯುತ್ ಸ್ಥಾವರ :** ಪಳಯುಳಿಕೆ ಇಂದನಗಳನ್ನ ದಹಿಸಿ ನೀರು ಕಾಯಿಸಿ ಹಬೆ ಉತ್ಪತ್ತಿ ಮಾಡಿ ಟರ್ಬೈನ್ ತಿರುಗಿಸಿ ವಿದ್ಯುತ್ ಉತ್ಪಾದಿಸುವುದು.

**ಜಲ ವಿದ್ಯತ್ ಸ್ಥಾವರ :** ಧುಮುಕುವ ನೀರಿನ ಪ್ರಚನ್ನ ಶಕ್ತಿಯನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸುವ ಸ್ಥಾವರ

**ಜೈವಿಕ ಶಕ್ತಿ:** ಸಸ್ಯ ಹಾಗೂ ಸಸ್ಯೋತ್ಪನ್ನಗಳ ಜೈವಿಕ ವಸ್ತುಗಳಿಂದ ರೂಪಾಂತರ ಹೊಂದುವ ಶಕ್ತಿಯ ಮೂಲ.

**ಜೈವಿಕ ಅನಿಲದ ಪ್ರಧಾನ ಘಟಕ :** ಮಿಥೇನ್ (75%)

**ಜೈವಿಕ ಅನಿಲದ ಘಟಕಗಳು :** ಮಿಥೇನ್, ಕಾರ್ಬನ್ ಡೈಆಕ್ಸೈಡ್, ಹೈಡ್ರೋಜನ್ ಮತ್ತು ಹೈಡ್ರೋಜನ್ ಸಲ್ಫೈಡ್

**ಪವನ ಶಕ್ತಿ :** ಸೂರ್ಯ ವಾತಾವರಣ ತಾಪದ ಏರಿಳಿತದಿಂದ ಉಂಟಾಗುವ ಗಾಳಿಯ ಚಲನೆಯಿಂದ ಉತ್ಪಾದಿಸುವ ಶಕ್ತಿ.

**ಗಾಳಿ ಯಂತ್ರ :** ಪವನಶಕ್ತಿ ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸುವ ಸಾದನ

**ಸೌರ ಕೋಶ :** ಸೌರಶಕ್ತಿಯನ್ನು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸುವ ಸಾದನ (0.5 ವೋಲ್ಟ ವಿದ್ಯುತ್ ಉತ್ಪಾದಿಸುತ್ತದೆ)

**ಸೌರ ಕುಕ್ಕರ್:** ಕನ್ನಡಿಗಳ ಮೂಲಕ ಸೂರ್ಯಕಿರಣಗಳನ್ನು ಕೇಂದ್ರೀಕರಿಸಿ ಹೆಚ್ಚಿನ ತಾಪವನ್ನುಂಟುಮಾಡಿ ಸೌರಶಕ್ತಿಯಿಂದ ಅಹಾರ ಬೇಯಿಸುವ ಸಾದನ

**ಉಬ್ಬರ ಶಕ್ತಿ:** ಸಮುದ್ರ ಹಾಗೂ ಸಾಗರಗಳಲ್ಲಿ ಉಬ್ಬರ ಮತ್ತು ಇಳಿತ ಪರಿಣಾಮವಾಗಿ ಉಂಟಾಗುವ ಶಕ್ತಿ. ಇದನ್ನು ವಿದ್ಯುಚ್ಛಕ್ತಿಯಾಗಿ ಪರಿವರ್ತಿಸಬದು.

**ಅಲೆಗಳ ಶಕ್ತಿ :** ಸಮುದ್ರದ ಅಲೆಗಳ ಚಲನಾ ಶಕ್ತಿ. ಇದನ್ನು ವಿದ್ಯುಚ್ಛಕ್ತಿಯಾಗಿ ಪರಿವರ್ತಿಸಬಹುದಾಗಿದೆ.

**ಭೂಗರ್ಭ ಉಷ್ಣ ಶಕ್ತಿ :** ಭೂಮಿಯ ಮೇಲ್ಮೈನಿಂದ ಆಳದಲ್ಲಿರುವ ಉಷ್ಣಶಕ್ತಿ, ಇದನ್ನು ಯಾಂತ್ರಿಕ ಹಾಗೂ ವಿದ್ಯುಚ್ಛಕ್ತಿಯಾಗಿ ಪರಿವರ್ತಿಸಬಹುದಾಗಿದೆ.

**ನ್ಯೂಕ್ಲೀಯ ಶಕ್ತಿ :** ಭಾರಿ ಪರಮಾಣು ಬೀಜವನ್ನು ನ್ಯೂಟ್ರಾನ್ನಿಂದ ತಾಡಿಸಿದಾಗ ಅದು ಹಗುರ ಬೀಜ ಗಳಾಗಿ ವಿಬಭನೆಯಾದಾಗ ಬಿಡುಗಡೆ ಹೊಂದುವ ಶಕ್ತಿ.

**ನ್ಯೂಕ್ಲೀಯ ವಿದ್ಯುತ್ ಕ್ರಿಯಾಕಾರಿ:** ನ್ಯೂಕ್ಲೀಯ ವಿಧಳನ ಕ್ರಿಯೆಯಲ್ಲಿ ಬಿಡುಗಡೆಯಾಗುವ ಉಷ್ಣಶಕ್ತಿಯಿಂದ ಹಬೆ ಉತ್ಪತ್ತಿ ಮಾಡಿ ವಿದ್ಯುಚ್ಛಕ್ತಿ ಉತ್ಪಾದಿಸುವ ಸಾದನ

**ವೈಜ್ಞಾನಿಕ ಕಾರಣಗಳು :**

**ಸದ್ಯ ಅಸಾಂಪ್ರದಾಯಿಕ/ಪರ್ಯಾಯ ಶಕ್ತಿಯ ಆಕರಗಳನ್ನು ಬಳಸಲೇಬೇಕಾದ ಅನಿವಾರ್ಯತೆಯಿದೆ. ಕಾರಣ** ಸಾಂಪ್ರದಾಯಿಕ ಇಂಧನ ಮೂಲ ನಶಿಸುತ್ತಿರುವುದು, ವಾತಾವರಣ ಮಾಲಿನ್ಯವಾಗುತ್ತಿರುವುದು, ಶಕ್ತಿಯ ಬೇಡಿಕೆ ಹೆಚ್ಚಿರುವುದರಿಂದ.

**ಸಂಪ್ರದಾಯಕ ಶಕ್ತಿ ಆಕರಗಳು ಪರಿಸರ ಸ್ನೇಹಿಯಲ್ಲ :** ಏಕೆಂದರೆ ಸಂಪ್ರದಾಯಕ ಶಕ್ತಿ ಆಕರಗಳ(ಫಾಸಿಲ್ ಇಂದನಗಳು) ಬಳಕೆಯಿಂದ ಪರಿಸರ ಮಾಲಿನ್ಯ ಉಂಟಾಗುತ್ತದೆ

**ಸೌರಕುಕ್ಕರ್‌ನ ಒಳಭಾಗದಲ್ಲಿ ಕಪ್ಪು ಬಣ್ಣ ಬಳಿದಿರುತ್ತಾರೆ;** ಹೆಚ್ಚು ಶಾಖವನ್ನ ಹೀರಿಕೊಳ್ಳಲು.

**ಸೌರಕುಕ್ಕರ್‌ನಲ್ಲಿ ಸಮತಲ ದರ್ಪಣವನ್ನು ಬಳಸುತ್ತಾರೆ :** ದರ್ಪಣವು ಸೌರವಿಕಿರಣವನ್ನು ಪ್ರತಿಫಲಿಸಿ ಪಾತ್ರೆಯ ಮೇಲೆ ಬಿಳುವಂತೆ ಮಾಡುತ್ತದೆ.

**ಹೈಡ್ರೋಜನ್‌ನ್ನು ರಾಕೆಟ್ನಲ್ಲಿ ಬಳಸಲಾಗುತ್ತದೆ :** ಅದು ಸಂಪೀಡಿತ ನೈಸರ್ಗಿಕ ಅನಿಲಕ್ಕಿಂತ ಸ್ವಚ್ಚ ಹಾಗೂ ಅದು ಉರಿದಾಗ ಮಲಿನಕಾರಿಯಲ್ಲದ ನೀರು ಉಂಟಾಗುತ್ತದೆ.

**ಸೌರಕೋಶದ ಉತ್ಪಾದನೆ ದುಬಾರಿ:** ತಯಾರಿಕೆಗೆ ಬಳಸುವ ವಿಷೇಶ ದರ್ಜೆಯ ಸಿಲಿಕಾನ್‌ನ ಸೀಮಿತ,ಸೌರಫಲಕದಲ್ಲಿ ಸೌರಕೋಶಗಳನ್ನು ಒಂದಕ್ಕೊಂದು ಸಂಪರ್ಕಿಸಲು ಬಳಸುವ ಬೆಳ್ಳಿ ದುಬಾರಿ.

**ಭಾರತದಲ್ಲಿ ಬೆರಣಿ ಭರವಸೆಯ ಸ್ಥಿರ ಇಂಧನವಾದರು ಕಾರ್ಯಕ್ಷಮತೆ ಕಡಿಮೆ :** ದಹಿಸಿದಾಗ ಹೆಚ್ಚು ಶಾಖ ಉತ್ಪತ್ತಿಯಾಗುವುದಿಲ್ಲ * ಅಧಿಕ ಹೊಗೆ ಬಿಡುಗಡೆಯಾಗುತ್ತದೆ * ಅಧಿಕ ಶೇಷ

**ಜೈವಿಕ ಅನಿಲ ಪರ್ಯಾಯ ಶಕ್ತಿಯ ಆಕರವಾಗಿ ವರಧಾನ :** ಪ್ರಾಣಿ ಮತ್ತು ಸಸ್ಯ ತ್ಯಾಜ್ಯಗಳಿಂದ ತಯಾರಿಕೆ ಸುಲಭ * ಹೊಗೆ ರಹಿತವಾಗಿ ಉರಿಯುತ್ತದೆ ,ಶಾಖ ದಕ್ಷತೆ ಹೆಚ್ಚು , ಶೇಷ ರಹಿತ * ಬೆಳಕನ್ನು ಪಡೆಯಲು ಬಳಸಬಹುದು * ಜೈವಿಕಸ್ಥಾವರದಲ್ಲಿನ ಉಳಿಕೆ ಬಗ್ಗಡ ರಂಜಕ ಮತ್ತು ನೈಟ್ರೋಜನ್ ಯುಕ್ತ ಉತ್ತಮ ಗೊಬ್ಬರ * ತ್ಯಾಜ್ಯ ವಿಲೇವಾರಿ ದಕ್ಷ ಮತ್ತು ಕ್ಷೇಮ.

**ಬೃಹತ್ ಅಣೆಕಟ್ಟುಗಳ ನಿರ್ಮಾಣ ಹಲವು ಸಮಸ್ಯೆಗಳ ಆಗರ/ಬೃಹತ್ ಅಣೆಕಟ್ಟುಗಳ ನಿರ್ಮಾಣಕ್ಕೆ ಪರಿಸರ ಪ್ರೇಮಿಗಳ ವಿರೋಧವಿದೆ :** ವ್ಯವಸಾಯ ಯೋಗ್ಯ ಹಾಗೂ ವಾಸ ಯೋಗ್ಯ ಭೂಮಿಯ ಹಾಗೂ ಕಾಡುಗಳ ನಾಶವಾಗುತ್ತದೆ * ಪರಿಸರ ವ್ಯವಸ್ಥೆಯ ನಾಶ ಎಕೆಂದರೆ ಮುಳುಗಡೆಯಾದ ಸಸ್ಯರಾಶಿ ಕೊಳೆತು ಹಸಿರುಮನೆ ಅನಿಲ ಬಿಡುಗಡೆಯಾಗುತ್ತದೆ * ಮುಳುಗಡೆ ಸಂತ್ರಸ್ತರಿಗೆ ಸೂಕ್ತ ಪನರ್ವಸತಿ ಸಮಸ್ಯೆ

## ಅನುಕೂಲಗಳು/ ಅನ್ವಯಗಳು

**ಸೌರಕುಕ್ಕರ್ :** ಪರಿಸರ ಮಾಲಿನ್ಯವಿಲ್ಲ,ಬಳಸಲು ಸುಲಭ .ನವೀಕರಿಸಬಹುದಾದ ಶಕ್ತಿ ಆಕರದ ಬಳಕೆ

**ಜೈವಿಕ ಇಂದನ/ಅನಿಲ :** ಹೊಗೆ ರಹಿತವಾಗಿ ಉರಿಯುತ್ತದೆ,ಶಾಕ ದಕ್ಷತೆ ಹೆಚ್ಚು ,ಶೇಷ ರಹಿತ

**ಪವನ ಶಕ್ತಿ :** ಪರಿಸರ ಸ್ನೇಹಿ ,ಉತ್ತಮ ಕಾರ್ಯಕ್ಷಮತೆ ಉಳ್ಳದ್ದು

**ಅಲೆಗಳ ಶಕ್ತಿ :** ಏರು ಪೇರುಗಳು ಕಡಿಮೆ, ಹೆಚ್ಚು ನಂಬಲರ್ಹ

**ಸೌರ ಫಲಕ :** ಚಲನಶೀಲ ಭಾಗಗಳಿಲ್ಲ , ಕಡಿಮೆ ನಿರ್ವಹಣೆ ,ಎಲ್ಲಾ ಪ್ರದೇಶಗಳಲ್ಲೂ ಅಳವಡಿಸಬಹುದು ,ಕೇಂದ್ರೀಕರಿಸುವ ಸಾದನದ ಅವಶ್ಯಕತೆ ಇಲ್ಲ.

**ಭೂಗರ್ಭ ಉಷ್ಣ ಶಕ್ತಿ** ವರ್ಷದ ಎಲ್ಲಾ ಕಾಲದಲ್ಲೂ ಲಭ್ಯ ,ಮಾಲಿನ್ಯ ರಹಿತ, ಕಡಿಮೆ ವೆಚ್ಚ

**ಸೌರಕೋಶದ ವೈಜ್ಞಾನಿಕ ಮತ್ತು ತಾಂತ್ರಿಕ ಅನ್ವಯಗಳು :** ಉಪಗ್ರಹ ಮತ್ತು ಬಾಹ್ಯಾಕಾಶ ಶೋದಕಗಳಲ್ಲಿ ಶಕ್ತಿ ಆಕರಗಳಾಗಿ ಬಳಕೆ * ದೂರ ಪ್ರದೇಶಗಳಲ್ಲಿ ರೆಡಿಯೋ ಅಥವಾ ತಂತಿ ರಹಿತ ಪ್ರಸರಣ ವ್ಯವಸ್ಥೆಯಲ್ಲಿ ,ದೂರದರ್ಶನ ಪ್ರಸಾರ ಕೇಂದ್ರಗಳಲ್ಲಿ , ಸಂಚಾರ ಮಾರ್ಗದರ್ಶನ ದೀಪಗಳಲ್ಲಿ.

## ಅನಾನುಕೂಲಗಳು/ಅವಗುಣಗಳು

**ಸೌರಕುಕ್ಕರ್/ಸೌರಶಕ್ತಿ ಸಾಧನಗಳು :** ಕೆಲಸ ನೆಡೆಯುವುದು ನಿಧಾನ , ಸೂರ್ಯನ ಬೆಳಕಿನಲ್ಲಿ ಮಾತ್ರ ಕೆಲಸ ಮಾಡುವುದು, ರಾತ್ರಿ ಮತ್ತು ಮೋಡದ ದಿನಗಳಲ್ಲಿ ಕೆಲಸ ಮಾಡುವುದಿಲ್ಲ, .ಶೀತ ಪ್ರದೇಶಕ್ಕೆ ಸೂಕ್ತವಲ್ಲ

**ಪಳಯುಳಿಕೆ ಇಂದನಗಳು(ಪಾಸಿಲ್ ಇಂದನಗಳು) :** ಪರಿಸರ ಮಾಲಿನ್ಯ ಉಂಟುಮಾಡುತ್ತವೆ,ನವೀಕರಣ ಅಸಾದ್ಯ ,ಆಮ್ಲ ಮಳೆ ಮತ್ತು ಹಸಿರುಮನೆ ಪರಿಣಾಮ ಉಂಟಾಗುವುದು **ಉತ್ತಮ ಇಂಧನದ ಲಕ್ಷಣ;** 1 ಅದು ಬಿಡುಗಡೆ ಮಾಡುವ ಹೊಗೆ ಕಡಿಮೆ ಇರಬೇಕು 2. ಉಳಿಯುವ ಶೇಷ ಪದಾರ್ಥ ಇರಬಾರದು 3. ಸುಲಭವಾಗಿ ದೊರೆಯಬೇಕು 4. ಸುಲಭವಾಗಿ ಸಂಗ್ರಹಿಸಲು/ ಸಾಗಿಸಲು ಸಾಧ್ಯವಾಗಬೇಕು.

**ನವೀಕರಿಸಲಾಗದ ಇಂಧನದಿಂದ ಪರಿಸರಕ್ಕೆ ಉಂಟಾಗುವ ಹಾನಿ**1. ಸ್ಮಾಗ್ 2. ಆಮ್ಲ ಮಳೆ 3. ಹಸಿರು ಮನೆ ಪರಿಣಾಮ

ಜೈವಿಕ ಅನಿಲದ ಪ್ರಮುಖ ಘಟಕ ಮತ್ತು ಶೇಕಡಾ ಪ್ರಮಾಣ **ಮೀಥೇನ್ 75%**

**ಸೌರಕೋಶ**ಸೌರ ಶಕ್ತಿಯನ್ನು ವದ್ಯುತ್ ಶಕ್ತಿಯಾಗಿ ಪರಿವರ್ತಿಸುವ ಸಾಧನ **ಸೌರ ಕೋಶಗಳ ಉಪಯೋಗ**1.ವೈಜ್ಞಾನಿಕ ಹಾಗೂ ತಾಂತ್ರಿಕ ಅನ್ವಯಗಳಲ್ಲಿ 2. ಕೃತಕ ಉಪಗ್ರಹ ಮಂಗಳ ಗ್ರಹ ರಕ್ಷಾ ಗಾಮಿಗಳಂತಹ ಬಾಹ್ಯಾಕಾಶ ನೌಕೆಗಳಲ್ಲಿ. 3.ದೂರ ಪ್ರದೇಶ ಸ್ಥಾಪಿಸಿರುವ ರೇಡಿಯೋ ಅಥವಾ ತಂತಿರಹಿತ ಪ್ರಸರಣ 4. ದೂರದರ್ಶನ ಪ್ರಸಾರ ಕೇಂದ್ರ

**ಸಾಂಪ್ರದಾಯಿಕ ಆಕರ** 1.ಪಳೆಯಳಿಕೆ ಇಂಧನಗಳು 2. ಉಷ್ಣ ವಿದ್ಯುತ್ ಸ್ಥಾವರ 3. ಜಲ ವಿದ್ಯುತ್ ಸ್ಥಾವರ 4. ನೈಸರ್ಗಿಕ ಅನಿಲ ಜೈವಿಕ ಅನಿಲ

